## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ-1018/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 17.03.2021.

## ವಿಚಾರಣಾ ವರದಿ

**ಉಪಸ್ಥಿತರು:** **ಸೆಲ್ವಕುಮಾರ್.ಸಿ,** ಅಪರ ನಿಬಂಧಕರು ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ-1 **ಶ್ರೀ ರಾಜೇಂದ್ರಕುಮಾರ್ ಕಡೇಮನಿ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, **ಆ.ಸ.ನೌ-2 ಶ್ರೀ ಬಸವಂತಪ್ಪ ಎಸ್ ಅಮಾತ್ಯಣ್ಣನವರ,** ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, **ಆ.ಸ.ನೌ-3 ಶ್ರೀ. ಮಲ್ಲಪ್ಪ ದೇವಪ್ಪ ವಿಜಾಪುರ,** ಗ್ರಾಮ ಪಂಚಾಯತಿ ಕಾರ್ಯದರ್ಶಿ, **ಆ.ಸ.ನೌ-4 ಶ್ರೀ. ಶೇಖರಪ್ಪ ಶಿವಪ್ಪ ಪಾವಿನ್,** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು **ಆ.ಸ.ನೌ-5 ಶ್ರೀ. ಸಂಗಮೇಶ ಸಜ್ಜನ್,** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅತ್ತಿಗೆರೆ, ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ, ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಜಿಎಂ/7986/2015/ಸನಿಕಾಸ-1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 01.07.2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 635 ಗ್ರಾಪಂಕಾ 2017 ಬೆಂಗಳೂರು, ದಿನಾಂಕ: 09.08.2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/1018/2017, ಬೆಂಗಳೂರು ದಿನಾಂಕ: 21.09.2017.
4. Note No.Uplok-1 & 2/DE/Transfers/ 2019, dated 07.02.2019.

* * * *

ದೂರುದಾರರಾದ ಶ್ರೀ. **ಮಂಜುನಾಥ್** ಪಕೀರಪ್ಪ ನೀರಲಗಿ, ಅತ್ತಿಗೇರಿ ಗ್ರಾಮ, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ (**ಇನ್ನು ಮುಂದೆ ದೂರುದಾರರೆಂದು ಕರೆಯಲ್ಪಡುತ್ತಾರೆ**) ರವರು ಆ.ಸ.ನೌ-1 ಶ್ರೀ **ರಾಜೇಂದ್ರಕುಮಾರ್ ಕಡೇಮನಿ,** ಹಿಂದಿನ ಪಂಚಾಯತಿ ಅಭಿವೃದ್ಧಿ

ಅಧಿಕಾರಿ, ಅತ್ತಿಗೇರಿ ಗ್ರಾಮ ಪಂಚಾಯತಿ, ಆ.ಸ.ನೌ–2 ಶ್ರೀ **ಬಸವಂತಪ್ಪ ಎಸ್ ಅಮಾತ್ಯಣ್ಣನವರ,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅತ್ತಿಗೇರಿ ಗ್ರಾಮ ಪಂಚಾಯತಿ (ಹಾಲಿ ನಿವೃತ್ತ), ಆ.ಸ.ನೌ–3 ಶ್ರೀ. **ಮಲ್ಲಪ್ಪ ದೇವಪ್ಪ ವಿಜಾಪುರ,** ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅತ್ತಿಗೇರಿ ಗ್ರಾಮ ಪಂಚಾಯತಿ, **ಆ.ಸ.ನೌ–4 ಶ್ರೀ. ಶೇಖರಪ್ಪ ಶಿವಪ್ಪ ಪಾವಿನ್,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅತ್ತಿಗೇರಿ ಗ್ರಾಮ ಪಂಚಾಯತಿ ಮತ್ತು ಆ.ಸ.ನೌ–5 ಶ್ರೀ. **ಸಂಗಮೇಶ ಸಜ್ಜನ್,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅತ್ತಿಗೆರೆ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ, **(ಇನ್ನು ಮುಂದೆ ಕ್ರಮವಾಗಿ ಆಪಾದಿತ ಸರ್ಕಾರಿ ನೌಕರ 1 ರಿಂದ 5 ಎಂದು ಕರೆಯಲ್ಪಡುತ್ತಾರೆ)** ರವರುಗಳು ಸರ್ಕಾರಿ ನೌಕರರಾಗಿದ್ದು, ದೂರುದಾರರು ದೂರು ಅರ್ಜಿಯನ್ನು ಸಲ್ಲಿಸಿ, ಅತ್ತಿಗೇರಿ ಗ್ರಾಮ ಪಂಚಾಯತಿ, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಸನ್ 2005 ರಿಂದ ಇಲ್ಲಿಯವರೆಗೆ ಬಸವ ವಸತಿ ಯೋಜನೆ, ಅಂಬೇಡ್ಕರ್ ವಸತಿ ಯೋಜನೆಗಳ ಅಡಿಯಲ್ಲಿ ಆಡಳಿತ ಮಂಡಳಿಯ ಸದಸ್ಯರ ಬಹುತೇಕ ಫಲಾನುಭವಿಗಳಾಗಿದ್ದು ಅದರಲ್ಲಿ ಸರ್ಕಾರಿ ನೌಕರರು ಕೂಡ ಇದ್ದಾರೆ, ಸದರಿ ಫಲಾನುಭವಿಗಳಲ್ಲಿ ಹೆಚ್ಚು ಜನರು ಮನೆ ಕಟ್ಟಿಕೊಳ್ಳದೆ ಹಣ ಪಡೆದುಕೊಂಡಿದ್ದಾರೆ, ಪರಿಶಿಷ್ಟರಿಗೆ ಮೀಸಲಿದ್ದ ಮನೆಗಳನ್ನು ಸಾಮಾನ್ಯ ವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ ಹಂಚಿದ್ದಾರೆ, ಸದರಿ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡದೆ ತಮ್ಮ ಮನಸ್ಸಿಗೆ ಬಂದಂತೆ ಸದರಿ ಗ್ರಾಮ ಪಂಚಾಯತ್‌ನ ಸದಸ್ಯರು ಹಾಗೂ ಆಪಾದಿತ ಸರ್ಕಾರಿ ನೌಕರರುಗಳು ಸೇರಿಕೊಂಡು ಫಲಾನುಭವಿಗಳಿಂದ ಹಣ ಪಡೆದುಕೊಂಡು, ಹಣ ಕೊಟ್ಟ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದಾರೆ. (2) ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಗ್ರಾಮತಾಣಾ ಸರ್ಕಾರಿ ಜಾಗದಲ್ಲಿ 20 ವರ್ಷಕ್ಕಿಂತ ಹಿಂದಿನಿಂದಲೂ ವಾಸ ಮಾಡುತ್ತಾ ಬಂದಿರುವ ಬಡ ಜನರಿಂದ 1 ಮನೆಗೆ ರೂ. 6,000/- ರಿಂದ ರೂ. 10,000/- ಗಳಂತೆ ಹಣವನ್ನು ಅಕ್ರಮ ಸಕ್ರಮಗೊಳಿಸುವುದಾಗಿ ಎದುರುದಾರರು ಪಡೆದುಕೊಂಡಿದ್ದಾರೆ. (3) ಎಂಜಿಎನ್‌ಆರ್‌ಇಜಿಎ

ಯೋಜನೆ ಅಡಿ ಕೆಲಸ ನಿರ್ವಹಿಸದೆ ಬೋಗಸ್ ಬಿಲ್ ಮಾಡಿ ಪಡೆದುಕೊಂಡಿದ್ದಾರೆ (4) 13ನೇ ಹಣಕಾಸು ಯೋಜನೆಯಡಿ ಆನೇಕ ಕಾಮಗಾರಿಗಳನ್ನು ಮಾಡದೆ ಬೋಗಸ್ ಬಿಲ್ ಮಾಡಿ ಲಕ್ಷಾಂತರ ಹಣವನ್ನು ಎದುರುದಾರರು ಪಡೆದುಕೊಂಡಿದ್ದಾರೆ ಮತ್ತು (5) ನೀರು ಹಾಗೂ ವಿದ್ಯುತ್ ಸರಬರಾಜು ಮಾಡುವುದಾಗಿ ಬೋಗಸ್ ಬಿಲ್ ಮಾಡಿ ಲಕ್ಷಾಂತರ ಹಣವನ್ನು ಎದುರುದಾರರು ಪಡೆದುಕೊಂಡಿದ್ದಾರೆಂದು ಆಪಾದಿಸಿರುತ್ತಾರೆ. ಸದರಿ ದೂರಿನ ಮೇಲೆ ಕ್ರಮವಹಿಸಿದ್ದು, ಪರಿಶೀಲಿಸಲಾಗಿ ಮೇಲ್ನೋಟಕ್ಕೆ ಆ.ಸ.ನೌ–1 **ಶ್ರೀ ರಾಜೇಂದ್ರಕುಮಾರ್ ಕಡೇಮನಿ,** ಪಂಚಾಯತಿ ಅಭಿವೃದ್ದಿ ಅಧಿಕಾರಿ, **ಆ.ಸ.ನೌ–2 ಶ್ರೀ ಬಸವಂತಪ್ಪ ಎಸ್ ಅಮಾತ್ಯಣ್ಣನವರ,** ನಿವೃತ್ತ ಪಂಚಾಯತಿ ಅಭಿವೃದ್ದಿ ಅಧಿಕಾರಿ, **ಆ.ಸ.ನೌ–3 ಶ್ರೀ. ಮಲ್ಲಪ್ಪ ದೇವಪ್ಪ ವಿಜಾಪುರ,** ಗ್ರಾಮ ಪಂಚಾಯತಿ ಕಾರ್ಯದರ್ಶಿ, **ಆ.ಸ.ನೌ–4 ಶ್ರೀ. ಶೇಖರಪ್ಪ ಶಿವಪ್ಪ ಪಾವಿನ್,** ಪಂಚಾಯತಿ ಅಭಿವೃದ್ದಿ ಅಧಿಕಾರಿ ಮತ್ತು **ಆ.ಸ.ನೌ–5 ಶ್ರೀ. ಸಂಗಮೇಶ ಸಜ್ಜನ್,** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅತ್ತಿಗೆರೆ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ, ರವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಆರೋಪಿತ ನೌಕರ ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯಸ್ಥರಾಗಿದ್ದಾರೆಂದು ಕಂಡು ಬಂದಿದ್ದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಗೌರವಾನ್ವಿತ ಉಪಲೋಕಾಯುಕ್ತರು, ಕರ್ನಾಟಕ ಇವರಿಗೆ ಒಪ್ಪಿಸುವಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ–2 ರಂತೆ ಸರ್ಕಾರವು **ಆ.ಸ.ನೌ–2 ಶ್ರೀ ಬಸವಂತಪ್ಪ ಎಸ್ ಅಮಾತ್ಯಣ್ಣನವರ,** ನಿವೃತ್ತ ಪಂಚಾಯತಿ ಅಭಿವೃದ್ದಿ ಅಧಿಕಾರಿ, ಈಗಾಗಲೇ ಸೇವೆಯಿಂದ ವಯೋ ನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ

ನಿಯಮಾವಳಿಗಳು–1957 ರ ನಿಯಮ **214 (2) (ಬಿ) (i)** ರನ್ವಯ ಮತ್ತು ಆ.ಸ.ನೌ–1 **ಶ್ರೀ ರಾಜೇಂದ್ರಕುಮಾರ್ ಕಡೇಮನಿ,** ಪಂಚಾಯತಿ ಅಭಿವೃದ್ದಿ ಅಧಿಕಾರಿ, **ಆ.ಸ.ನೌ–3** ಶ್ರೀ. **ಮಲ್ಲಪ್ಪ ದೇವಪ್ಪ ವಿಜಾಪುರ,** ಗ್ರಾಮ ಪಂಚಾಯತಿ ಕಾರ್ಯದರ್ಶಿ, **ಆ.ಸ.ನೌ–4** ಶ್ರೀ. **ಶೇಖರಪ್ಪ ಶಿವಪ್ಪ ಪಾವಿನ್,** ಪಂಚಾಯತಿ ಅಭಿವೃದ್ದಿ ಅಧಿಕಾರಿ ಮತ್ತು **ಆ.ಸ.ನೌ–5** ಶ್ರೀ. **ಸಂಗಮೇಶ ಸಜ್ಜನ್,** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅತ್ತಿಗೆರೆ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ, **ರವರುಗಳ** ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ–**14** ಎ ರಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಲೋಕಾಯುಕ್ತ ಸಂಸ್ಥೆಗೆ ವಹಿಸಿದ್ದು, ಅದರನುಸಾರ ಗೌರವಾನ್ವಿತ ಉಪಲೋಕಾಯುಕ್ತರು–1 ರವರ ನಾಮನಿರ್ದೇಶನ ಆದೇಶ ಸಂಖ್ಯೆ ಉಪಲೋಕ್–1/ಡಿಇ/1018/2017 ಬೆಂಗಳೂರು ದಿನಾಂಕ 21/09/2017 ರಂತೆ ಆಪಾದಿತ ಸರ್ಕಾರಿ ನೌಕರ–1 ರಿಂದ 5 ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು ದೋಷಾರೋಪಣೆ ತಯಾರು ಮಾಡಿ ಇಲಾಖಾ ವಿಚಾರಣೆ ಮಾಡಿ ವರದಿ ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು–11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತಾರೆ. ಉಲ್ಲೇಖ–4 ರಂತೆ ಅಪರ ನಿಬಂಧಕರು, ವಿಚಾರಣೆಗಳು–11 ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು–16 ರವರಿಗೆ ವರ್ಗಾವಣೆಗೊಂಡಿರುತ್ತದೆ.

(2) ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.–1 ರಿಂದ 5 ರವರುಗಳ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು, ವಿಚಾರಣೆಗಳು–11 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು

ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ-1 ರಿಂದ 5 ರವರುಗಳಿಗೆ ದಿನಾಂಕ: 24/05/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ

ಮೊದಲನೆಯದಾಗಿ:- ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ **ರಾಜೇಂದ್ರ ಕುಮಾರ್ ಕಡೇ**ಮನಿ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ, ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಬಸವಂತಪ್ಪ ಎಸ್. ಅಮಾತ್ಯಣ್ಣನವರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿಅಧಿಕಾರಿಯಾಗಿ, ಮೂರನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ, ನಾಲ್ಕನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಶೇಖರಪ್ಪ ಶಿವಪ್ಪ ಪಾವಿನ್ ಆದ ನೀವು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು ಐದನೆಯ ಆಪಾದಿತ ಸರ್ಕಾರಿ ನೌಕರರಾದ ಸಂಗಮೇಶ ಸಜ್ಜನ್ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸಂಬಂಧಪಟ್ಟಂತೆ 2010 ರಿಂದ 2015 ನೇಯ ಸಾಲಿನವರೆಗಿನ ಇಂದಿರಾ ಆವಾಸ್, ಬಸವ ವಸತಿ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಆಯ್ಕೆಯಾಗಿದ್ದ 42

ಫಲಾನುಭವಿಗಳ ಪೈಕಿ 13 ಫಲಾನುಭವಿಗಳು ಮನೆಗಳನ್ನು ನಿರ್ಮಿಸದೆ ಬೇರೆ ಮನೆಗಳ ಜಿ.ಪಿ.ಎಸ್. ಮತ್ತು ಛಾಯಚಿತ್ರಗಳನ್ನು ದತ್ತಾಂಶದಲ್ಲಿ ಅಳವಡಿಸಿ ರೂ. 6,26,300/- ಗಳನ್ನು ಬಿಡುಗಡೆ ಮಾಡಲು ನೀವುಗಳು ಎಂದರೆ 1 ರಿಂದ 5 ನೆಯ ಆಪಾದಿತ ಸರ್ಕಾರಿ ನೌಕರರುಗಳು ಅನುವು ಮಾಡಿಕೊಟ್ಟು ಆ ಮೂಲಕ ನೀವುಗಳು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

ಎರಡನೆಯದಾಗಿ:- ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ **ರಾಜೇಂದ್ರ ಕುಮಾರ್ ಕಡೇಮನಿ** ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ, ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಬಸವಂತಪ್ಪ ಎಸ್. ಅಮಾತ್ಯಣ್ಣನವರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ, ಮೂರನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ, ನಾಲ್ಕನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಶೇಖರಪ್ಪ ಶಿವಪ್ಪ ಪಾವಿನ್ ಆದ ನೀವು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು ಐದನೆಯ ಆಪಾದಿತ ಸರ್ಕಾರಿ ನೌಕರರಾದ ಸಂಗಮೇಶ ಸಜ್ಜನ್ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸಂಬಂಧಪಟ್ಟಂತೆ 2010 ರಿಂದ 2015 ನೇಯ ಸಾಲಿನವರೆಗಿನ ಇಂದಿರಾ ಆವಾಸ್, ಬಸವ ವಸತಿ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ

ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದ್ದ ಕೋಟಾದಡಿಯಲ್ಲಿ 5 ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡಿ ಆ ಸಂಬಂಧ ರೂ. 3,72,500/- ಗಳನ್ನು ಬಿಡುಗಡೆ ಮಾಡಲು ನೀವು ಎಂದರೆ ಆಪಾದಿತ ಸರ್ಕಾರಿ ನೌಕರರಾದ 1 ರಿಂದ 5 ರವರು ಅನುವು ಮಾಡಿಕೊಟ್ಟು ಆ ಮೂಲಕ ನೀವುಗಳು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

ಮೂರನೆಯದಾಗಿ:- ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ **ರಾಜೇಂದ್ರ ಕುಮಾರ್ ಕಡೇಮನಿ** ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ, ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಬಸವಂತಪ್ಪ ಎಸ್. ಅಮಾತ್ಯಣ್ಣನವರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿಅಧಿಕಾರಿಯಾಗಿ, ಮೂರನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ, ನಾಲ್ಕನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಶೇಖರಪ್ಪ ಶಿವಪ್ಪ ಪಾವಿನ್ ಆದ ನೀವು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು ಐದನೆಯ ಆಪಾದಿತ ಸರ್ಕಾರಿ ನೌಕರರಾದ ಸಂಗಮೇಶ ಸಜ್ಜನ್ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸಂಬಂಧಪಟ್ಟಂತೆ 2010 ರಿಂದ 2015 ನೇಯ ಸಾಲಿನವರೆಗಿನ ಇಂದಿರಾ ಆವಾಸ್, ಬಸವ ವಸತಿ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಮಹಿಳೆಯರು

ಹಾಗೂ ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದ 15 ಫಲಾನುಭವಿಗಳು ಮನೆ ಕಟ್ಟಿಕೊಂಡಿದ್ದರೂ ಸಹ ಅವರುಗಳ ಹೆಸರುಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡದೆ ಆ ಸಂಬಂಧ ಠರಾವು ಹೊರಡಿಸದೆ ಫಲಾನುಭವಿಗಳನ್ನಾಗಿ ನಿಯಮಬಾಹಿರವಾಗಿ ಸೇರಿಸಿ ಆ ಸಂಬಂಧ ರೂ. 10,93,000/- ಗಳನ್ನು ಬಿಡುಗಡೆ ಮಾಡಲು ನೀವು ಎಂದರೆ ಆಪಾದಿತ ಸರ್ಕಾರಿ ನೌಕರರಾದ 1 ರಿಂದ 5 ರವರುಗಳು ಅನುವು ಮಾಡಿಕೊಟ್ಟು ಆ ಮೂಲಕ ನೀವು ಎಂದರೆ ಆಪಾದಿತ ಸರ್ಕಾರಿ ನೌಕರರಾದ 1 ರಿಂದ 5 ರವರು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

## ಅನುಬಂಧ-2
## ದೋಷರೋಪಣೆಯ ವಿವರ

ದೂರುದಾರರಾದ **ಶ್ರೀಮಂಜುನಾಥ ಫಕೀರಪ್ಪ ನೀರಲಗಿ,** ಅಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ, ಅತ್ತಿಗೇರಿ ಅಂಚೆ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ ರವರು ತಮ್ಮ ದೂರಿನಲ್ಲಿ 2005 ರಿಂದ ಇಲ್ಲಿಯವರೆಗೆ ಬಸವ ವಸತಿ ಯೋಜನೆ, ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ಆಡಳಿತ ಮಂಡಳಿಯ ಸದಸ್ಯರು, ಸರ್ಕಾರಿ ನೌಕರರು ಇದ್ದು ಮನೆಗಳನ್ನು ಕಟ್ಟಿಕೊಳ್ಳದೆ ಇದ್ದರೂ ಸಹ ಹಣ ಪಡೆದುಕೊಂಡಿರುತ್ತಾರೆ, ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಮೀಸಲಿಟ್ಟ ಮನೆಗಳನ್ನು ಸಾಮಾನ್ಯ ಫಲಾನುಭವಿಗಳಿಗೆ ಹಂಚಿರುತ್ತಾರೆ, ಫಲಾನುಭವಿಗಳಿಂದ ಹಣ ಪಡೆದುಕೊಂಡು ನಿಯಮಕ್ಕೆ ವಿರುದ್ದವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಿರುತ್ತಾರೆ, ಸರ್ಕಾರಿ ಜಾಗದಲ್ಲಿ 20 ವರ್ಷಗಳಿಂದ ವಾಸ ಮಾಡುತ್ತಿರುವ ಬಡ ಜನರಿಂದ ರೂ.6,000/- ದಿಂದ ರೂ.10,000/-ಗಳ ಹಣವನ್ನು ಪಡೆದುಕೊಂಡು ಸಕ್ರಮಗೊಳಿಸುವುದಾಗಿ ಪಡೆದುಕೊಂಡಿರುತ್ತಾರೆ ಹಾಗೂ, ಎಂ.ಜಿ.ಎನ್.ಆರ್.ಇ.ಜಿ.

ಯೋಜನೆಯಡಿ ಕೆಲಸ ನಿರ್ವಹಿಸದೆ ಬೋಗಸ್ ಬಿಲ್ ಮಾಡಿ ಬ್ಯಾಂಕಿನ ಖಾತೆದಾರರಿಂದ ಹಣ ಪಡೆದುಕೊಂಡಿರುತ್ತಾರೆ ಹಾಗೂ 13ನೇ ಹಣಕಾಸು ಯೋಜನೆಯಡಿ ಕಾಮಗಾರಿಗಳನ್ನು ಮಾಡದೆ ಬೋಗಸ್ ಬಿಲ್ ಮಾಡಿ ಲಕ್ಷಾಂತರ ರೂಪಾಯಿಗಳ ಹಣ ಪಡೆದುಕೊಂಡಿರುತ್ತಾರೆ ಹಾಗೂ ನೀರು ಮತ್ತು ವಿದ್ಯುತ್ ಸರಬರಾಜು ಮಾಡುವುದಾಗಿ ಲಕ್ಷಾಂತರ ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಆಪಾದಿಸಿರುತ್ತಾರೆ.

ದೂರುದಾರರು ಮಾಡಿದ ಆಪಾದನೆಗೆ ಸಂಬಂಧಿಸಿದಂತೆ ಈ ಸಂಸ್ಥೆಯ ತಾಂತ್ರಿಕ ವಿಭಾಗ ಸಹಾಯಕ ಕಾರ್ಯಪಾಲಕ ಅಭಿಯಂತರರು–4 ರವರು ತನಿಖೆ ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ತನಿಖಾಧಿಕಾರಿಯವರು ಸಲ್ಲಿಸಿರುವ ತನಿಖಾ ವರದಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಕಂಡುಬರುತ್ತವೆ.

1) ಆಯ್ಕೆಯಾದ ಒಟ್ಟು 41 ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸಿದಾಗ 11 ಫಲಾನುಭವಿಗಳು ಮನೆಯನ್ನು ನಿರ್ಮಾಣ ಮಾಡದಿದ್ದರೂ ಸಹ ಬೇರೆಯವರು ನಿರ್ಮಿಸಿರುವ ಮನೆಯ ಪ್ರಗತಿ ವರದಿ ಮತ್ತು ಛಾಯಾಚಿತ್ರಗಳು ಜಿಪಿಎಸ್ ವಿವರಗಳನ್ನು ದತ್ತಾಂಶದಲ್ಲಿ ನಮೂದಿಸಿ ಹಣ ಬಿಡುಗಡೆ ಮಾಡಲಾಗಿರುತ್ತದೆ.

2) 13 ಫಲಾನುಭವಿಗಳು ಮನೆ ಕಟ್ಟದಿದ್ದರೂ ಸಹ ಆ.ಸ.ನೌಕರರು ಬೇರೆ ಮನೆಯವರ ಜಿಪಿಎಸ್ ಮತ್ತು ಛಾಯಾಚಿತ್ರಗಳನ್ನು ದತ್ತಾಂಶದಲ್ಲಿ ಅಳವಡಿಸಿ ರೂ.6,26,300/– ಗಳ ಹಣವನ್ನು ಬಿಡುಗಡೆ ಮಾಡಿಸಿರುತ್ತಾರೆ.

3) ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಮೀಸಲಿಟ್ಟ ಖೋಟಾದಲ್ಲಿ 5 ಸಾಮಾನ್ಯ ಫಲಾನುಭವಿಗಳನ್ನು ಆಯ್ಕೆ ಮಾಡಿ ಸದರಿ ಫಲಾನುಭವಿಗಳಿಗೆ ರೂ.3,72,500/– ಗಳನ್ನು ಆಪಾದಿತ ಸರ್ಕಾರಿ ನೌಕರರು ಬಿಡುಗಡೆ ಮಾಡಿಸಿರುತ್ತಾರೆ.

4) 15 ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡದಿದ್ದರೂ ಸಹ ಮತ್ತು ಆ ಬಗ್ಗೆ ಠರಾವು ಮಾಡದೇ ಇದ್ದರೂ ಸಹ ನಿಯಮ ಬಾಹಿರವಾಗಿ 15 ಫಲಾನುಭವಿಗಳನ್ನು ಆಯ್ಕೆ ಮಾಡಿ ರೂ.10,93,000/-ಗಳ ಹಣ ಬಿಡುಗಡೆಗೆ ಅನುವು ಮಾಡಿಸಿರುತ್ತಾರೆ.

5) 2010 ರಿಂದ 2015ನೇ ಸಾಲಿನವರೆಗೆ ಇಂದಿರಾ ಆವಾಜ್, ಬಸವ ವಸತಿ ಹಾಗೂ ಆಶ್ರಯ ಯೋಜನೆಯಡಿ ಬೋಗಸ್ ಬಿಲ್ ಮಾಡಿ ರೂ.20,91,800/-ಗಳ ಆಪಾದಿತ ಸರ್ಕಾರಿ ನೌಕರರು ನಡೆಸಿರುತ್ತಾರೆ.

ತನಿಖಾಧಿಕಾರಿಯವರು ಸಲ್ಲಿಸಿರುವ ತನಿಖಾ ವರದಿಯನ್ನು ಆಪಾದಿತರಾದ ನಿಮಗೆ ಕಳುಹಿಸಿದ್ದು ನೀವು ಸಲ್ಲಿಸಿದ ಆಕ್ಷೇಪಣೆಗಳನ್ನು ಒಪ್ಪಲು ಯೋಗ್ಯವಲ್ಲವಾದ ಕಾರಣ, ನೀವು ನಿಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರಡಿ ನಿಯಮ 3(1)ರಡಿಯಲ್ಲಿ ನೀವುಗಳು ದುರ್ವರ್ತನೆಯನ್ನೆಸಗಿರುತ್ತಾರೆಂದು ಕಂಡು ಬಂದಿದ್ದರಿಂದ, ನಿಮ್ಮ ವಿರುದ್ದ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಗೌರವಾನ್ವಿತ ಉಪಲೋಕಾಯುಕ್ತ-1 ರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ (ಆಪಾದಿತ ಸರ್ಕಾರಿ ನೌಕರ-2 ಆದ ಶ್ರೀ ಬಸವಂತಪ್ಪಎಸ್. ಅಮಾತ್ಯಣ್ಣವರ ಇವರು ದಿನಾಂಕ 30-09-2014 ರಂದು ನಿವೃತ್ತಿ ಹೊಂದಿರುವುದರಿಂದ ಆಪಾದಿತ ಸರ್ಕಾರಿ ನೌಕರ-2 ರವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ ನಿಯಮಗಳು 214(2) (ಬಿ)(i)ರ (ಅಡಿಯಲ್ಲಿ) ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ ಮತ್ತು ಆಪಾದಿತ ಸರ್ಕಾರಿ ನೌಕರ-1, 3 ರಿಂದ 5 ರವರುಗಳ ವಿರುದ್ಧ ಕರ್ನಾಟಕ ನಾಗರಿಕ ಸೇವಾ ನಿಯಮಗಳು 14-ಎ ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಸರ್ಕಾರಿ ಆದೇಶವನ್ನು ಹೊರಡಿಸಿದ್ದು, ಅದರಂತೆ ಗೌರವಾನ್ವಿತ ಉಪಲೋಕಾಯುಕ್ತ-1 ರವರು ಅಪರ

ನಿಬಂಧಕರು, ವಿಚಾರಣೆಗಳು–11 ರವರಿಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಆದ್ದರಿಂದ, **ನಿಮ್ಮಗಳ ವಿರುದ್ಧ ಈ ಮೇಲ್ಕಂಡ ದೋಷಾರೋಪಣೆ.**

(3) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌ–1 ರಿಂದ 5 ರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ.–1 ರಿಂದ 5 ರವರುಗಳು ದಿನಾಂಕ 25/06/2018 ರಂದು ವಿಚಾರಣಾಧಿಕಾರಿಯವರ ಮುಂದೆ ಹಾಜರಾಗಿದ್ದು, ಸದರಿಯವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ.–1 ರಿಂದ 5 ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

4) ಆ.ಸ.ನೌ–1 ರಿಂದ 5 ರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

5) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.–1, 2 ಮತ್ತು 3 ರವರುಗಳು ತಮ್ಮ ಪರವಾಗಿ ದಿನಾಂಕ 18.08.2018 ರಂದು ಪ್ರತ್ಯೇಕವಾಗಿ ಮತ್ತು ಆ.ಸ.ನೌ–4 ರವರು ದಿನಾಂಕ 27.10.2018 ರಂದು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. **ಆ.ಸ.ನೌ–1 ರವರು ಮೃತಪಟ್ಟಿರುತ್ತಾರೆ.**

ಆ.ಸ.ನೌ–2 ರವರು  ತಮ್ಮ ವಿರುದ್ಧ ರಚಿಸಲಾದ ಆರೋಪಗಳಿಗೆ ಸಂಬಂಧಿಸಿದಂತೆ, ವಿವರಿಸುವುದೇನೆಂದರೆ, ತಾನು ದಿನಾಂಕ 05/07/2014 ರಿಂದ 30/08/2014 ರವರೆಗೆ ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ ಹೇಳಿರುತ್ತಾರೆ.  **ಮುಂದುವರೆದು, ವಿವರಿಸುವುದೇನೆಂದರೆ, ಫಲಾನುಭವಿಯಾದ ಶ್ರೀಮತಿ ಸಾವಕ್ಕ ಕೋಂ ನಾಗಪ್ಪ ದವಲಿ ರವರ ಕೋಡ್ ನಂಬರ್ 167418 ನೇದ್ದರ ಜಿಪಿಎಸ್ ತನ್ನ ಅವಧಿಯಲ್ಲಿ ಆಗಿರುತ್ತದೆಂದು ಆದರೆ, ಸದರಿ ಜಿಪಿಎಸ್‌ಗೆ ತನ್ನ ಸಹಿ ಇರುವುದಿಲ್ಲವೆಂದು ಹೇಳಿರುತ್ತಾರೆ.** ಮುಂದುವರೆದು, ತನ್ನ ಅವಧಿಯಲ್ಲಿ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲವೆಂದು ಮತ್ತು ತಾನು ದುರ್ನಡತೆಯಿಂದ ವರ್ತಿಸಿರುವುದಿಲ್ಲವೆಂದು ಹೇಳಿದ್ದಾರೆ.  ಸದರಿ ಜಿಪಿಎಸ್ ಹೊರತುಪಡಿಸಿ ಯಾವುದೇ ರೀತಿಯ ಹಣಕಾಸಿನ ವ್ಯವಹಾರವಾಗಲೀ, ವಿವಿಧ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದಿಲ್ಲವೆಂದು ಹಾಗೂ ಆಯ್ಕೆ ಮಾಡುವ ಪೂರ್ವದಲ್ಲಿ ಯಾವುದೇ ಗ್ರಾಮಸಭೆ ನಡೆಸಿರುವುದಿಲ್ಲವೆಂದು ಹೇಳಿದ್ದಾರೆ.

ಮುಂದುವರೆದುಸದರಿ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ತಾವುಗಳು ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವುದಿಲ್ಲವೆಂದು, ತಾವು ಸರ್ಕಾರಿ ಕೆಲಸವನ್ನು ಪ್ರಾಮಾಣಿಕವಾಗಿ ಕಾನೂನಿನ ಚೌಕಟ್ಟಿನಲ್ಲಿ  ನಿರ್ವಹಿಸಿರುವುದಾಗಿ, ಯಾವುದೇ ದುರ್ನಡತೆ ತೋರಿರುವುದಿಲ್ಲವೆಂದು,   ಆದ್ದರಿಂದ, ತಮ್ಮನ್ನು ಈ ಆರೋಪದಿಂದ ಕೈಬಿಡುವಂತೆ ವಿನಂತಿಸಿರುತ್ತಾರೆ.

ಆ.ಸ.ನೌ–3 ರವರು ತಮ್ಮ ವಿರುದ್ಧ ರಚಿಸಲಾದ ಆರೋಪಗಳಿಗೆ ಸಂಬಂಧಿಸಿದಂತೆ, ವಿವರಿಸುವುದೇನೆಂದರೆ, ತಾನು ದಿನಾಂಕ 01/05/2015 ರಿಂದ 16/07/2015 ರವರೆಗೆ ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ ಹೇಳಿರುತ್ತಾರೆ ಮುಂದುವರೆದು, ತನ್ನ ಅವಧಿಯಲ್ಲಿ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲವೆಂದು ಮತ್ತು ತಾನು ದುರ್ನಡತೆಯಿಂದ ವರ್ತಿಸಿರುವುದಿಲ್ಲವೆಂದು ಹೇಳಿದ್ದಾರೆ ಹಾಗೂ ವಿವಿಧ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದಿಲ್ಲವೆಂದು ಹಾಗೂ ಆಯ್ಕೆ ಮಾಡುವ ಪೂರ್ವದಲ್ಲಿ ಯಾವುದೇ ಗ್ರಾಮಸಭೆ ನಡೆಸಿರುವುದಿಲ್ಲವೆಂದು ಹೇಳಿದ್ದಾರೆ. ಕಾರಣ, ಆರೋಪ ಮುಕ್ತಗೊಳಿಸುವಂತೆ ವಿನಂತಿಸಿರುತ್ತಾರೆ.

ಆ.ಸ.ನೌ–4 ರವರು ತಮ್ಮ ವಿರುದ್ಧ ರಚಿಸಲಾದ ಆರೋಪಗಳಿಗೆ ಸಂಬಂಧಿಸಿದಂತೆ, ವಿವರಿಸುವುದೇನೆಂದರೆ, ತಾನು ದಿನಾಂಕ 17/02/2015 ರಿಂದ 18/11/2015 ರವರೆಗೆ ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ ಹೇಳಿರುತ್ತಾರೆ ಮುಂದುವರೆದು, ತನ್ನ ಅವಧಿಯಲ್ಲಿ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲವೆಂದು ಮತ್ತು ತಾನು ದುರ್ನಡತೆಯಿಂದ ವರ್ತಿಸಿರುವುದಿಲ್ಲವೆಂದು ಹೇಳಿದ್ದಾರೆ ಹಾಗೂ ವಿವಿಧ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದಿಲ್ಲವೆಂದು ಹಾಗೂ ಆಯ್ಕೆ ಮಾಡುವ ಪೂರ್ವದಲ್ಲಿ ಯಾವುದೇ ಗ್ರಾಮಸಭೆ ನಡೆಸಿರುವುದಿಲ್ಲವೆಂದು ಹೇಳಿದ್ದಾರೆ. ಕಾರಣ, ಆರೋಪ ಮುಕ್ತಗೊಳಿಸುವಂತೆ ವಿನಂತಿಸಿರುತ್ತಾರೆ.

6) ಈ ವಿಚಾರಣೆಯಲ್ಲಿ, ಆ.ಸ.ನೌ.–1 ರಿಂದ 5 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ **ಮಂಜುನಾಥ್ ಫಕೀರಪ್ಪ** ನೀರಲಗಿ ರವರನ್ನು **ಪಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿಸಿಕೊಂಡು, **ನಿ.ಪಿ.1 ರಿಂದ 4** ರವರೆಗಿನ ದಾಖಲಾತಿಗಳನ್ನು ಮತ್ತು ಶ್ರೀ **ಹೆಚ್.ಎನ್. ಶ್ರೀನಿವಾಸಮೂರ್ತಿ,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು **ಪಿ.ಡಬ್ಲ್ಯೂ–2** ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ–5 ಮತ್ತು 6 ದಾಖಲಾತಿಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ.–2 ರಿಂದ 5 ರವರುಗಳ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 04/03/2020 ರಂದು ಪಡೆದುಕೊಳ್ಳಲಾಗಿರುತ್ತದೆ.

7) **ಆಪಾದಿತ ಸರ್ಕಾರಿ ನೌಕರ–1** ರವರು ದಿನಾಂಕ **02.02.2020** ರಂದು ಮೃತಪಟ್ಟಿರುವುದಾಗಿ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾವೇರಿ ರವರು ವರದಿಯೊಂದಿಗೆ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, **ಅದರಂತೆ ಗೌರವಾನ್ವಿತ ಉಪಲೋಕಾಯುಕ್ತರವರು ಅನುಮೋದಿಸಿರುವುದರಿಂದ ಆ.ಸ.ನೌ–1 ರವರನ್ನು ಅಬೇಟೆಡ್ ಎಂದು ಪರಿಗಣಿಸಲಾಗಿರುತ್ತದೆ.**

8) **ಆ.ಸ.ನೌ.–3** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿದಿದ್ದು, **ಆ.ಸ.ನೌ–4** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ–2** ಎಂದು ಸಾಕ್ಷ್ಯ ನುಡಿದಿದ್ದು,

**ಆ.ಸ.ನೌ–2** ರವರು ತಮ್ಮ ಪರವಾಗಿ ತಾವೆ **ಡಿ.ಡಬ್ಲ್ಯೂ–3** ಎಂದು ಸಾಕ್ಷ್ಯ ನುಡಿದಿದ್ದು, **ನಿ.ಡಿ–1 ರಿಂದ** 4 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ ಮತ್ತು **ಆ.ಸ.ನೌ–5** ರವರು ತಮ್ಮ ಪರವಾಗಿ ತಾವೆ **ಡಿ.ಡಬ್ಲ್ಯೂ–4** ಎಂದು ಸಾಕ್ಷ್ಯ ನುಡಿದಿರುತ್ತಾರೆ.

9) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರುಗಳ ಮೇಲೆ ಆಪಾದಿಸಲಾದ ಎಲ್ಲಾ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

10) ಆ.ಸ.ನೌ–3 ಮತ್ತು 4 ರವರ ಪರ ವಕೀಲರು ಲಿಖಿತ ವಾದ ವಿವಾದವನ್ನು ಸಲ್ಲಿಸಿದ್ದು, ಆ.ಸ.ನೌ–2 ಮತ್ತು 5 ರವರು ಸದರಿ ವಾದ ವಿವಾದವನ್ನೆ ಮೆಮೋ ದಾಖಲಿಸಿ ಅನುಮೋದಿಸಿಕೊಂಡಿರುತ್ತಾರೆ. ಮಂಡನಾಧಿಕಾರಿಗಳ ವಾದವನ್ನು ಅಲಿಸಲಾಯಿತು.

11) ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

ಅಂಶ 1: ಬಾಗಶ: ಸಕಾರಾತ್ಮಕವಾಗಿದೆ.

ಅಂಶ 2: ಅಂತಿಮ ಆದೇಶದಂತೆ

**ಕಾರಣಗಳು:**

13) ಈ ವಿಚಾರಣೆಯಲ್ಲಿ, ಆ.ಸ.ನೌ.–1 ರಿಂದ 5 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ **ಮಂಜುನಾಥ್ ಫಕೀರಪ್ಪ** ನೀರಲಗಿ ರವರನ್ನು **ಪಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿಸಿಕೊಂಡು, **ನಿ.ಪಿ.1 ರಿಂದ 4** ರವರೆಗಿನ ದಾಖಲಾತಿಗಳನ್ನು ಮತ್ತು ಶ್ರೀ **ಹೆಚ್.ಎನ್. ಶ್ರೀನಿವಾಸಮೂರ್ತಿ,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು **ಪಿ.ಡಬ್ಲ್ಯೂ–2** ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ–5 ಮತ್ತು 6 ದಾಖಲಾತಿಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

ದೂರುದಾರರು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ದೂರು **ನಿ.ಪಿ–1** ಎಂದು, ದಿನಾಂಕ 11.03.2015 ರ ಪ್ರಪತ್ರ–1 ಮತ್ತು 2 ನ್ನು **ನಿಪಿ–2** ಮತ್ತು **ನಿಪಿ–3** ಎಂದು, ದೂರುದಾರರು ಮಾಹಿತಿ ಹಕ್ಕಿನಡಿ ಪಡೆದಿರುವ ದಾಖಲಾತಿಗಳು ಹಾಗೂ ದೂರುದಾರರ ಬಳಿ ಇದ್ದ ದಾಖಲಾತಿಗಳನ್ನು ಪುಟಸಂಖ್ಯೆ 7 ರಿಂದ ಪುಟಸಂಖ್ಯೆ 301 ರವರೆಗಿನದನ್ನು ಒಟ್ಟಾಗಿ ನಿ.ಪಿ–4 ಎಂದು ಗುರುತಿಸಿಕೊಂಡಿರುತ್ತಾರೆ.

14) ಶ್ರೀ ಹೆಚ್.ಎನ್. ಶ್ರೀನಿವಾಸಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು **ಪಿ.ಡಬ್ಲ್ಯೂ–2** ಎಂದು ಸಾಕ್ಷ್ಯ

ನುಡಿಸಿಕೊಂಡು, **ನಿ.ಪಿ.–5 ಮತ್ತು 6** ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಸಿಇಓ, ಹಾವೇರಿ ರವರು ತನಿಖಾ ತಂಡವನ್ನು ರಚಿಸಿ ವರದಿ ಸಲ್ಲಿಸುವಂತೆ ಈ ಕೆಳಕಂಡ ಅಧಿಕಾರಿಗಳನ್ನು ನೇಮಕ ಮಾಡಿದ್ದು, (1) ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಹಾವೇರಿ (2) ತಾಲ್ಲೂಕು ನೋಡೆಲ್ ಅಧಿಕಾರಿ (ವಸತಿ) ತಾಲ್ಲೂಕು ಪಂಚಾಯತಿ, ಶಿಗ್ಗಾಂವ್ (3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿಗ್ಗಾಂವ್ ಮತ್ತು (4) ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅತ್ತಿಗೇರಿ ಗ್ರಾಮಪಂಚಾಯತ್ ರವರುಗಳ ತನಿಖಾ ತಂಡ ದಿನಾಂಕ 05.11.2016 ಮತ್ತು 07/11/2016 ರಂದು ದೂರುದಾರರು ನೀಡಿದ ಪಟ್ಟಿಯಲ್ಲಿನ ಮನೆಗಳಿಗೆ ಪ್ರತ್ಯೇಕವಾಗಿ ಭೇಟಿ ನೀಡಿ ಪರಿಶೀಲಿಸಿ ವರದಿಯನ್ನು ನೀಡಿದ್ದು, ಸದರಿ ವರದಿ **ನಿ.ಪಿ–5 (46 ಹಾಳೆಗಳು)** ಎಂದು ಗುರುತಿಸಿಕೊಂಡಿದ್ದು, ಸದರಿ ವರದಿಯ ಆಧಾರದ ಮೇರೆಗೆ ಪಿಡಬ್ಲ್ಯೂ–2 ರವರು ದಿನಾಂಕ 24/11/2016 ರಂದು ಈ ಲೋಕಾಯುಕ್ತ ಸಂಸ್ಥೆಗೆ ವರದಿ ಸಲ್ಲಿಸಿದ್ದು, ಸದರಿ ವರದಿಯನ್ನು **ನಿ.ಪಿ–6** (6 ಹಾಳೆಗಳು) ಎಂದು ಗುರುತಿಸಿಕೊಂಡಿರುತ್ತಾರೆ.

15) ಆಪಾದಿತ ಸರ್ಕಾರಿ ನೌಕರ–2/ಡಿಡಬ್ಲ್ಯೂ–3 ರವರು ತಮ್ಮ ಪರವಾಗಿ ತಾನು ಪ್ರಭಾರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ದಿನಾಂಕ 05/07/2014 ರಿಂದ 30.08.2014 ರವರೆಗೆ ಕರ್ತವ್ಯ ನಿರ್ವಹಿಸದ ಬಗ್ಗೆ ಆ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯು ದಿನಾಂಕ 19/06/2018 ರಂದು ನೀಡಿದ ಸೇವಾ ಪ್ರಮಾಣ ಪತ್ರವನ್ನು **ನಿ.ಡಿ.–1** ಎಂದು ಗುರುತಿಸಿಕೊಂಡಿರುತ್ತಾರೆ. ಮುಂದುವರೆದು, ತಾನು **ದಿನಾಂಕ 05/07/2014**

ರಿಂದ **02/09/2014** ರವರೆಗೆ ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಬಗ್ಗೆ ಶಿಗ್ಗಾವಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರು ನೀಡಿದ ಸೇವಾ ಪ್ರಮಾಣ ಪತ್ರವನ್ನು **ನಿ.ಡಿ–2** ಎಂದು ಗುರುತಿಸಿಕೊಂಡಿರುತ್ತಾರೆ. **ಆ.ಸ.ನೌ–3 ರವರ ಕರ್ತವ್ಯ ಅವಧಿಯಲ್ಲಿ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಜಿ.ಪಿಆರ್‌ಎಸ್ ನಲ್ಲಿ ಆಪ್‌ಲೋಡ್ ಆದ ಒಂದು ಜೆರಾಕ್ಸ್ ಪ್ರತಿಯನ್ನು ನಿ.ಡಿ–3 ಎಂದು ಗುರುತಿಸಿಕೊಂಡಿರುತ್ತಾರೆ.** ಆ.ಸ.ನೌ–5 ರವರು ತಮ್ಮ ಕರ್ತವ್ಯ ಅವಧಿ ತೋರಿಸಲು ಸೇವಾ ಪ್ರಮಾಣ ಪತ್ರವನ್ನು ಹಾಜರ್‌ಪಡಿಸಿ **ನಿ.ಡಿ–4** ಎಂದು ಗುರುತಿಸಿಕೊಂಡಿರುತ್ತಾರೆ.

**16)** ಈ ಪ್ರಕರಣದಲ್ಲಿ ಆ.ಸ.ನೌ. ರವರುಗಳ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರ ಶ್ರೀ ಮಂಜುನಾಥ್ ಫಕೀರಪ್ಪ ನೀರಲಗಿ ರವರನ್ನು **ಪಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿಸಿಕೊಂಡಿದ್ದು, ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಅತ್ತಿಗೇರಿ ಗ್ರಾಮ ಪಂಚಾಯತಿಯಲ್ಲಿ 2010–2015ರ ಅವಧಿಯಲ್ಲಿ ಆದ ಬಸವ ವಸತಿ, ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ, ಫಲಾನುಭವಿಗಳನ್ನು ನಿಯಮಬಾಹಿರವಾಗಿ ಆಯ್ಕೆ ಮಾಡಿರುತ್ತಾರೆಂದು, ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟಿದ್ದ, ನಿವೇಶನಗಳನ್ನು ಸಾಮಾನ್ಯ ವರ್ಗದವರಿಗೆ ನಿಯಮಬಾಹಿರವಾಗಿ ಹಂಚಿಕೆ ಮಾಡಿರುತ್ತಾರೆಂದು, ಫಲಾನುಭವಿಗಳು ಮನೆಗಳನ್ನು ನಿರ್ಮಿಸದೇ ಇದ್ದಾಗ್ಯೂ ಬೋಗಸ್ ಬಿಲ್ ಮಾಡಿ ಹಣ ತೆಗೆದುಕೊಂಡಿರುತ್ತಾರೆಂದು, ಸದರಿ

ಹಣವನ್ನು ಫಲಾನುಭವಿಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸೇರಿಕೊಂಡು ಪಡೆದಿರುತ್ತಾರೆಂದು ನುಡಿದಿರುತ್ತಾರೆ.

17) ಪಿಡಬ್ಲ್ಯೂ–1 ರವರ ಮುಂದುವರೆದ ಸಾಕ್ಷ್ಯದಲ್ಲಿ, 14ನೇ ಹಣಕಾಸು ಯೋಜನೆಯಲ್ಲಿ, ನೀರು ಮತ್ತು ವಿದ್ಯುತ್ ಸರಬರಾಜು ಯೋಜನೆಯಲ್ಲಿ ಬೋಗಸ್ ಬಿಲ್‌ಗಳನ್ನು ತೆಗೆದಿರುತ್ತಾರೆಂದು, ಈ ಎಲ್ಲಾ ವಿಚಾರಗಳ ಬಗ್ಗೆ ತಾನು ಲೋಕಾಯುಕ್ತಕ್ಕೆ ದೂರು ಸಲ್ಲಿಸಿರುವುದಾಗಿ, ತಾನು ಸಲ್ಲಿಸಿದ ದೂರು **ನಿ.ಪಿ–1** ಎಂದು, ಪ್ರಪತ್ರ–1 ಮತ್ತು 2 ನ್ನು **ನಿ.ಪಿ.–2 ಮತ್ತು 3** ಎಂದು, ಆರ್.ಟಿ.ಐ ಮುಖಾಂತರ ಪಡೆದ ದಾಖಲೆಗಳನ್ನು ಮತ್ತು ಅವರ ಬಳಿ ಇದ್ದ ದಾಖಲೆಗಳನ್ನು ಸಲ್ಲಿಸಿದ್ದು, ಅವುಗಳು ಪುಟ ಸಂಖ್ಯೆ 7 ರಿಂದ ಪುಟ ಸಂಖ್ಯೆ 301 ಎಂದು ನಮೂದಾಗಿದ್ದು, ಅವುಗಳನ್ನು ಒಟ್ಟಾರೆಯಾಗಿ **ನಿ.ಪಿ–4** ಎಂದು ಗುರುತಿಸಿರುತ್ತಾರೆ.

18) ಶಿಸ್ತು ಪ್ರಾಧಿಕಾರವು ಆರೋಪವನ್ನು ರುಜುವಾತುಪಡಿಸಲು ಪಿಡಬ್ಲ್ಯೂ–2 ಶ್ರೀ ಹೆಚ್.ಎನ್. ಶ್ರೀನಿವಾಸಮೂರ್ತಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಸಾಕ್ಷ್ಯ ನುಡಿಸಿಕೊಂಡಿದ್ದು, ಅವರು ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ, ಈ ಕೆಳಕಂಡಂತೆ ನುಡಿದಿರುತ್ತಾರೆ:–

**" 2010–2015 ರ ಎಲ್ಲಾ ಯೋಜನೆಗಳ ಬಗ್ಗೆ ದೂರುದಾರರು ದೂರು ನೀಡಿದ್ದು, ಆ ಬಗ್ಗೆ ನಿರ್ದಿಷ್ಟವಾದ ಯೋಜನೆ ಮತ್ತು ಅವ್ಯವಹಾರದ ಬಗ್ಗೆ ಸೂಚಿಸಿದರ ಮೇರೆಗೆ, ದೂರುದಾರರು 42 ವಸತಿ ಫಲಾನುಭವಿಗಳ ಪಟ್ಟಿಯನ್ನು ನೀಡಿ, ಇದರಲ್ಲಿ ಅವ್ಯವಹಾರ ಆಗಿರುತ್ತದೆ ಎಂದು ಲಿಖಿತವಾಗಿ ದೂರುದಾರರು ತಿಳಿಸಿದ್ದು, ಸದರಿ ಪಟ್ಟಿಯ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ ರವರು ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ಶಿಗ್ಗಾಂವ್ ರವರಿಗೆ ತಿಳಿಸಲಾಗಿ, ಸಿಇಓ ಹಾವೇರಿರವರು ಒಂದು**

ತಂಡವನ್ನು ರಚಿಸಿದ್ದು, (1) ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಹಾವೇರಿ (2) ತಾಲ್ಲೂಕು ನೋಡೆಲ್ ಅಧಿಕಾರಿ (ವಸತಿ) ತಾಲ್ಲೂಕು ಪಂಚಾಯತಿ, ಶಿಗ್ಗಾಂವ್ (3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿಗ್ಗಾಂವ್ ಮತ್ತು (4) ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅತ್ತಿಗೇರಿ ಗ್ರಾಮಪಂಚಾಯತ್ ರವರುಗಳು ತಂಡದ ಸದಸ್ಯರಿದ್ದು, ಸದರಿ ತಂಡದಿಂದ ದಿನಾಂಕ 05/11/2016 ಮತ್ತು 07/11/2016 ರಂದು ದೂರುದಾರರು ನೀಡಿದ ಪಟ್ಟಿಯಲ್ಲಿನ ಮನೆಗಳಿಗೆ ಪ್ರತ್ಯೇಕವಾಗಿ ಭೇಟಿ ನೀಡಿ ಪರಿಶೀಲಿಸಿ ವರದಿಯನ್ನು ಸಿ.ಇ.ಓ ರವರ ಮೂಲಕ ದೃಢಿಕರಿಸಿ ಸಲ್ಲಿಸಿದ್ದು, ಸದರಿ ವರದಿಯನ್ನು ನಿ.ಪಿ–5 ಎಂದು (46 ಹಾಳೆಗಳು) ಮತ್ತು ಸದರಿ ವರದಿಯ ಆಧಾರದ ಮೇಲೆ ಗೌರವಾನ್ವಿತ ಉಪಲೋಕಾಯುಕ್ತರವರ ಆದೇಶದಂತೆ ತಾನು ದಿನಾಂಕ 24/11/2016 ರಂದು ವರದಿ ಸಲ್ಲಿಸಿದ್ದು ಸದರಿ ವರದಿಯನ್ನು ನಿ.ಪಿ–6 (6 ಹಾಳೆಗಳು) ಎಂದು ಗುರುತಿಸಿರುತ್ತಾರೆ."

" ಪಿಡಬ್ಲ್ಯೂ–2 ರವರ ಮುಂದುವರೆದ ಸಾಕ್ಷ್ಯದಲ್ಲಿ, ಸದರಿ ವರದಿಯಂತೆ ಈ ಕೆಳಕಂಡಂತೆ ಅವ್ಯವಹಾರವಾಗಿರುವ ಬಗ್ಗೆ ನುಡಿದಿರುತ್ತಾರೆ:

(1) 13 ಫಲಾನುಭವಿಗಳು ಮನೆ ನಿರ್ಮಿಸದೆ ಬೇರೆ ಯಾವುದೋ ಮನೆಗಳ ಜಿ.ಪಿ.ಎಸ್.ನ್ನು ನೀಡಿ ಹಣವನ್ನು ಸೆಳೆದಿರುತ್ತಾರೆ.

(2) 5 ಸಾಮಾನ್ಯ ವರ್ಗಕ್ಕೆ ಸೇರಿದ ಫಲಾನುಭವಿಗಳನ್ನು ಎಸ್.ಸಿ. ಎಸ್.ಟಿ. ವರ್ಗಕ್ಕೆ ಮೀಸಲಿಟ್ಟ ಕೋಟಾದಡಿ ಆಯ್ಕೆ ಮಾಡಿ, ಈ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡಲಾಗಿರುತ್ತದೆ.

(3) 15 ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ, ಠರಾವಿನಲ್ಲಿ ಅನುಮೋದನೆ ತೆಗೆದುಕೊಳ್ಳದೇ ಫಲಾನುಭವಿಗಳ ಪಟ್ಟಿಯಲ್ಲಿ ಸೇರಿಸಿ ಅವರುಗಳಿಗೆ ಹಣ ಬಿಡುಗಡೆ ಮಾಡಲಾಗಿರುತ್ತದೆ."

ಈ ಮೇಲ್ಕಂಡಂತೆ ಅವ್ಯವಹಾರವಾಗಿರುವುದಾಗಿ ತಾನು ಸಲ್ಲಿಸಿದ ನಿ.ಪಿ–6 ತನಿಖಾ ವರದಿಯಲ್ಲಿ ಉಲ್ಲೇಖಿಸಿರುವುದಾಗಿ ನುಡಿದಿರುತ್ತಾರೆ. **ನಿ.ಪಿ–6 ತನಿಖಾ ವರದಿಯನ್ನು** ಪರಿಶೀಲಿಸಿದಾಗ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ರವರು ಸಲ್ಲಿಸಿರುವ **ನಿ.ಪಿ–5** ತನಿಖಾ ವರದಿಯಲ್ಲಿಯೂ ದೂರುದಾರರು ಹೇಳಿರುವ 11 ಫಲಾನುಭವಿಗಳು ಮನೆ ನಿರ್ಮಿಸಿರುವುದಿಲ್ಲವೆಂದು ಹಾಗೂ ಸರ್ಕಾರದ ಹಣ ಪಡೆಯುವ ಸಲುವಾಗಿ ಪಿಡಿಓ ರವರು ಬೇರೆ ಮನೆಗಳ ಜಿಪಿಎಸ್ ನ್ನು ನಮೂದಿಸಿ ದತ್ತಾಂಶ ಅಳವಡಿಸಿ ಹಣ ಬಿಡುಗಡೆಗೆ ಅನುವು ಮಾಡಿಕೊಟ್ಟಿರುತ್ತಾರೆಂದು ಹೇಳಿರುತ್ತಾರೆ. ಅಲ್ಲದೆ, ಒಬ್ಬ ಫಲಾನುಭವಿಯು ಸರ್ಕಾರ ಹಣ ಪಡೆಯುವ ಕಾಲದಲ್ಲಿ ಮನೆ ನಿರ್ಮಿಸಿರಲಿಲ್ಲ ಎಂದು, **ಹಳೆ ಮನೆ ಜಿಪಿಎಸ್ ತೋರಿಸಿ ಹಣ ಪಡೆದು ನಂತರ ಮನೆ ಕಟ್ಟಿರುತ್ತಾರೆಂದು, ಹಾಗೂ ಒಬ್ಬ ಫಲಾನುಭವಿಯು ಬೇರೆಯಾಗಿ ಕಟ್ಟಿದ ಮನೆಯ ಜಿಪಿಎಸ್ ತೋರಿಸಿ ಹಣ ಪಡೆದುಕೊಂಡಿರುತ್ತಾರೆಂದು ಹೇಳಿರುತ್ತಾರೆ**. ಅಲ್ಲದೆ, ಅನಂತರವೂ ಕೂಡ ಸದರಿ ಮನೆಯಲ್ಲಿ ವಾಸವಾಗಿರುವುದಿಲ್ಲವೆಂದು ಹೇಳಿರುತ್ತಾರೆ. ಆದ್ದರಿಂದ, ಒಟ್ಟು 13 ಫಲಾನುಭವಿಗಳು ಮನೆ ನಿರ್ಮಿಸಿಕೊಳ್ಳದಿದ್ದಾಗ್ಯೂ ಅಂದಿನ ಪಿಡಿಓ ರವರು ಬೇರೆ ಮನೆಗಳ ಜಿಪಿಎಸ್ ನ್ನು ಹಾಗೂ ಛಾಯಚಿತ್ರಗಳನ್ನು ದತ್ತಾಂಶದಲ್ಲಿ ಅಳವಡಿಸಿ ರೂ. 6,26,300/– ಹಣ ಬಿಡುಗಡೆಯಾಗಲು ಅನುವು ಮಾಡಿಕೊಟ್ಟಿರುತ್ತಾರೆಂದು, ಇದಕ್ಕೆ ಆ ಸಮಯದಲ್ಲಿದ್ದ ಗ್ರಾಮಪಂಚಾಯತಿ ಪಿಡಿಓ ಹಾಗೂ ಪಂಚಾಯತಿ ಅಧ್ಯಕ್ಷರೆ ಕಾರಣರಾಗಿರುತ್ತಾರೆಂದು, ಆ ವರದಿಯಲ್ಲಿ ಅಭಿಪ್ರಾಯ ನೀಡಿರುವುದಾಗಿ ಹೇಳಿರುತ್ತಾರೆ. ಅಲ್ಲದೆ, ಸಿಇಓ ರವರು ಸಲ್ಲಿಸಿದ ತನಿಖಾ ವರದಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕಾಗಿ ಮೀಸಲಿಟ್ಟ ಕೋಟಾದಡಿ 5 ಸಾಮಾನ್ಯ ವರ್ಗದ ಫಲಾನುಭವಿಗಳ ಆಯ್ಕೆ ಮಾಡಿರುವುದು ಕಂಡುಬಂದಿರುತ್ತದೆಂದು ಸದರಿ 5 ಆಯ್ಕೆಗಳು ಅಸಿಂಧು ಆಗಿರುತ್ತದೆಂದು, ಸದರಿ ಫಲಾನುಭವಿಗಳಿಗೆ ರೂ. 3,72,500/– ಗಳನ್ನು ಬಿಡುಗಡೆ

ಮಾಡಲು ಅಂದಿನ ಗ್ರಾಮಪಂಚಾಯತಿ ಪಿಡಿಓ ಮತ್ತು ಪಂಚಾಯತಿ ಅಧ್ಯಕ್ಷರು ಕಾರಣಕರ್ತರೆಂದು ವರದಿಯಲ್ಲಿ ಉಲ್ಲೇಖಿಸಿರುವುದಾಗಿ ಹೇಳಿರುತ್ತಾರೆ.

19) ಅಲ್ಲದೆ, ಸಿ.ಇ.ಓ ರವರು ಸಲ್ಲಿಸಿದ ವರದಿಯಲ್ಲಿ ಗ್ರಾಮಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸಿ, ಅನುಮೋದನೆ ಪಡೆದು ಠರಾವು ಮಾಡಿ, ಮೇಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದ್ದು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ ರವರು ಸಲ್ಲಿಸಿದ ವರದಿಯಲ್ಲಿ ದೂರುದಾರರು ಕಾಣಿಸಿದ 15 ಫಲಾನುಭವಿಗಳ ಹೆಸರನ್ನು ಗ್ರಾಮಸಭೆಯಲ್ಲಿ ಮಂಡಿಸಿ ಠರಾವು ಮಾಡಿರುವ ಬಗ್ಗೆ ದಾಖಲೆಗಳು ಇರುವುದಿಲ್ಲವೆಂದು ಹಾಗೂ ಕಡತಗಳನ್ನು ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ. ಠರಾವು ಮಾಡದೆ ಫಲಾನುಭವಿಗಳನ್ನು ಸೇರಿಸಿರುವುದು ನಿಯಮಕ್ಕೆ ವಿರುದ್ಧವಿರುವುದಾಗಿ ಫಲಾನುಭವಿಗಳಿಗೆ ಹಣ ಬಿಡುಗಡೆಯಾಗಲು ಪಿಡಿಓ ರವರು ಕಾರಣಕರ್ತರೆಂದು ಹೇಳಿರುತ್ತಾರೆ.

20) ಸಿಇಓ ರವರು ಸಲ್ಲಿಸಿದ ತನಿಖಾ ವರದಿಯಲ್ಲದೆ, ಈ ಲೋಕಾಯುಕ್ತ ತನಿಖಾಧಿಕಾರಿ ಪಿಡಬ್ಲ್ಯೂ–2 ರವರು ಸಲ್ಲಿಸಿದ ತನಿಖಾ ವರದಿ ನಿ.ಪಿ–6 ರಲ್ಲಿ ಈ ಕೆಳಕಂಡಂತೆ ಅಭಿಪ್ರಾಯಿಸಿರುತ್ತಾರೆ:–

**“ ತನಿಖಾ ವರದಿಯಲ್ಲಿ ಗಮನಿಸಲಾದ ಅಂಶಗಳಿಂದ ಹಾಗೂ ದಾಖಲಾತಿಗಳ ಪರಿಶೀಲನೆಯಿಂದ 2010 ನೇ ಸಾಲಿನಿಂದ 2015ನೇ ಸಾಲಿನವರೆಗಿನ ‘ಇಂದಿರಾ ಆವಾಸ್’, ‘ಬಸವ ವಸತಿ’ ಹಾಗೂ ‘ಆಶ್ರಯ’ ಯೋಜನೆಯಡಿ ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಬೋಗಸ್ ಬಿಲ್ ಆಗಿರುವುದು ಹಾಗೂ ಅವ್ಯವಹಾರವಾಗಿರುವುದು ಸಾಬೀತಾಗಿರುವುದಾಗಿ ಅಭಿಪ್ರಾಯಿಸಲಾಗಿದೆ.”**

ಈ ಮೇಲ್ಕಂಡಂತೆ, ಈ ಲೋಕಾಯುಕ್ತ ತನಿಖಾಧಿಕಾರಿಯು ನಿ.ಪಿ–6 ತನಿಖಾ ವರದಿಯಲ್ಲಿ ಉಲ್ಲೇಖಿಸಿರುವುದನ್ನು ಪರಿಶೀಲಿಸಿದಾಗ, ಈ ಆ.ಸ.ನೌ ರವರುಗಳು ಮೇಲ್ಕಂಡ ವಸತಿ ಯೋಜನೆಗಳಲ್ಲಿ ನಿಯಮವನ್ನು ಪರಿಪಾಲಿಸದೆ ಅನರ್ಹ ಫಲಾನುಭವಿಗಳಿಗೆ ಹಣ

ಬಿಡುಗಡೆಯಾಗಲು ಕಾರಣಕರ್ತರಾಗಿರುತ್ತಾರೆಂಬುದು ಸ್ಪಷ್ಟವಾಗುತ್ತದೆ. **ನಿ.ಪಿ–5** ರಲ್ಲಿನ ಪುಟಸಂಖ್ಯೆ 7 ರಲ್ಲಿ ಆ.ಸ.ನೌ–2 ಶ್ರೀ **ಬಸವಂತಪ್ಪ ಎಸ್. ಅಮ್ಯಾತಣ್ಣನವರ್** ದಿನಾಂಕ05.07.2014 ರಿಂದ 02.09.2014 ರವರೆಗೆ ಆ.ಸ.ನೌ–3 ಶ್ರೀ **ಮಲ್ಲಪ್ಪ ದೇವಪ್ಪ ವಿಜಾಪುರ** ರವರು ಪ್ರಭಾರಿ ಪಿಡಿಓ ಆಗಿ 01.05.2015 ರಿಂದ 16.07.2015 ರವರೆಗೆ, ಆ.ಸ.ನೌ–4 ಶ್ರೀ **ಶೇಖರಪ್ಪ ಶಿವಪ್ಪ ಪಾವಿನ್** ರವರು ಪಿಡಿಓ ಆಗಿ 17.07.2015 ರಿಂದ 18.11.2015 ರವರೆಗೆ ಹಾಗೂ ಆ.ಸ.ನೌ–5 ಶ್ರೀ **ಸಂಗಮೇಶ್ ಸಜ್ಜನ್** ರವರು ಪಿಡಿಓ ಆಗಿ 19.11.2015 ರಿಂದ 31.12.2015 ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆಂಬುದು ರುಜುವಾತಾಗುತ್ತದೆ. ಈ ಆ.ಸ.ನೌ–2 ರವರು ಅನರ್ಹ ಫಲಾನುಭವಿಗಳಿಗೆ ಹಣ ಮಂಜೂರು ಮಾಡಲು ಸಹಕರಿಸಿರುತ್ತಾರೆಂಬುದು ದೃಢಪಡುತ್ತದೆ.

21) ಆ.ಸ.ನೌ–3 ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ ರವರು ಡಿಡಬ್ಲ್ಯೂ–1 ಎಂದು ಸಾಕ್ಷ್ಯ ನುಡಿದಿದ್ದು, ತನ್ನ ಮೌಖಿಕ ಸಾಕ್ಷದ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಾನು ದಿನಾಂಕ 01.05.2015 ರಿಂದ 16.07.2015 ರವರೆಗೆ ಮಾತ್ರ ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಗ್ರೇಡ್–2 ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ, ಈ 2 1/2 ತಿಂಗಳ ಕರ್ತವ್ಯ ಅವದಿಯಲ್ಲಿ ಯಾವುದೇ ವಸತಿ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ತಾನು ತಯಾರಿಸಿರುವುದಿಲ್ಲವೆಂದು ಹಾಗೂ ಗ್ರಾಮಸಭೆಯನ್ನು ಸಹ ತಾನು ಕರೆದಿರಲಿಲ್ಲವೆಂದು ನುಡಿದಿರುತ್ತಾರೆ. ಅದೇ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದ್ದ ಕೋಟಾದಡಿ 5 ಜನ ಸಾಮಾನ್ಯ ವರ್ಗದ ಫಲನುಭವಿಗಳನ್ನು ಆಯ್ಕೆ ಮಾಡಿ ರೂ. 3,72,500/– ಗಳನ್ನು ಬಿಡುಗಡೆ ಮಾಡಿರುವುದಿಲ್ಲವೆಂದು ಏಕೆಂದರೆ, ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡುವ ಅವಧಿಯಲ್ಲಿ ತಾನು ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು ಹಾಗೂ ಮಹಿಳೆಯರು ಮತ್ತು ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದ 15 ಫಲಾನುಭವಿಗಳು ಮನೆ ಕಟ್ಟಿಕೊಂಡಿದ್ದರೂ ಸಹ ಅವರುಗಳ

ಹೆಸರುಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡದೆ ಮತ್ತು ಠರಾವು ಹೊರಡಿಸದೆ ನಿಯಮಬಾಹಿರವಾಗಿ ಅವರಿಗೆ ಹಣ ಬಿಡುಗಡೆ ಮಾಡಿರುವುದಾಗಿ ಹೇಳಿರುವ ಅವಧಿಯಲ್ಲಿ ತಾನು ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು ನುಡಿದಿರುತ್ತಾರೆ.

22) ಆ.ಸ.ನೌ–4 ಶ್ರೀ ಶೇಖರಪ್ಪ ಶಿವಪ್ಪ ಪಾವಿನ್ ರವರು ಡಿಡಬ್ಲ್ಯೂ–2 ಎಂದು, ಮೌಖಿಕ ಸಾಕ್ಷ್ಯ ನುಡಿದಿದ್ದು, ತಮ್ಮ ಮೌಖಿಕ ಸಾಕ್ಷ್ಯದ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ದಿನಾಂಕ 17/07/2015 ರಿಂದ 18/11/2015 ರವರೆಗೆ ಮಾತ್ರ ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ, ಈ 4 ತಿಂಗಳ ಕರ್ತವ್ಯಾವದಿಯಲ್ಲಿ ಯಾವುದೇ ವಸತಿ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ತಾನು ತಯಾರಿಸಿರುವುದಿಲ್ಲವೆಂದು ಹಾಗೂ ಗ್ರಾಮಸಭೆಯನ್ನು ಸಹ ತಾನು ಕರೆದಿರಲಿಲ್ಲವೆಂದು ನುಡಿದಿರುತ್ತಾರೆ. ಅದೇ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದ್ದ ಕೋಟಾದಡಿ 5 ಜನ ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡಿ ರೂ. 3,72,500/– ಗಳನ್ನು ಬಿಡುಗಡೆ ಮಾಡಿರುವುದಿಲ್ಲವೆಂದು ಏಕೆಂದರೆ, ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡುವ ಅವಧಿಯಲ್ಲಿ ತಾನು ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು ಹಾಗೂ ಮಹಿಳೆಯರು ಮತ್ತು ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದ 15 ಫಲಾನುಭವಿಗಳು ಮನೆ ಕಟ್ಟಿಕೊಂಡಿದ್ದರೂ ಸಹ ಅವರುಗಳ ಹೆಸರುಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡದೆ ಮತ್ತು ಠರಾವು ಹೊರಡಿಸದೆ ನಿಯಮಬಾಹಿರವಾಗಿ ಅವರಿಗೆ ಹಣ ಬಿಡುಗಡೆ ಮಾಡಿರುವುದಾಗಿ ಹೇಳಿರುವ ಅವಧಿಯಲ್ಲಿ ತಾನು ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು ನುಡಿದಿರುತ್ತಾರೆ.

23) ಆ.ಸ.ನೌ–2 ಶ್ರೀ **ಬಸವಂತಪ್ಪ ಎಸ್. ಅಮಾತ್ಯಣ್ಣನವರ್** ರವರು ಡಿಡಬ್ಲ್ಯೂ–3 ಎಂದು, ಮೌಖಿಕ ಸಾಕ್ಷ್ಯ ನುಡಿದಿದ್ದು ತಮ್ಮ ಮೌಖಿಕ ಸಾಕ್ಷ್ಯದ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ದಿನಾಂಕ 05/07/2014 ರಿಂದ 30/08/2014 ರವರೆಗೆ ಮಾತ್ರ ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ, ಈ 1 ತಿಂಗಳು 25 ದಿವಸಗಳ ಕರ್ತವ್ಯಾವದಿಯಲ್ಲಿ ಯಾವುದೇ ವಸತಿ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ತಾನು ತಯಾರಿಸಿರುವುದಿಲ್ಲವೆಂದು ಹಾಗೂ ಗ್ರಾಮಸಭೆಯನ್ನು ಸಹ ತಾನು ಕರೆದಿರಲಿಲ್ಲವೆಂದು ನುಡಿದಿರುತ್ತಾರೆ. ಅದೇ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದ್ದ ಕೋಟಾದಡಿ 5 ಜನ ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡಿ ರೂ. 3,72,500/– ಗಳನ್ನು ಬಿಡುಗಡೆ ಮಾಡಿರುವುದಿಲ್ಲವೆಂದು ಏಕೆಂದರೆ, ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡುವ ಅವಧಿಯಲ್ಲಿ ತಾನು ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು ಹಾಗೂ ಮಹಿಳೆಯರು ಮತ್ತು ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದ 15 ಫಲಾನುಭವಿಗಳು ಮನೆ ಕಟ್ಟಿಕೊಂಡಿದ್ದರೂ ಸಹ, ಅವರುಗಳ ಹೆಸರುಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡದೆ ಮತ್ತು ಠರಾವು ಹೊರಡಿಸದೆ ನಿಯಮಬಾಹಿರವಾಗಿ ಅವರಿಗೆ ಹಣ ಬಿಡುಗಡೆ ಮಾಡಿರುವುದಾಗಿ ಹೇಳಿರುವ ಅವಧಿಯಲ್ಲಿ ತಾನು ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು ನುಡಿದಿರುತ್ತಾರೆ. **ಆದರೆ, ಈ ಆ.ಸ.ನೌ–2 ರವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ಫಲಾನುಭವಿಯಾದ ಶ್ರೀಮತಿ ಸಾವಕ್ಕ ಕೊಂ ನಾಗಪ್ಪ ದವಲಿ ರವರ ಕೋಡ್ ನಂಬರ್ 167418 ನೇದ್ದರ ಜಿಪಿಎಸ್ ತನ್ನ ಅವಧಿಯಲ್ಲಿ ಆಗಿದೆ ಎಂಬುದನ್ನು ಒಪ್ಪಿಕೊಂಡಿರುತ್ತಾರೆ.** ಸದರಿ ಜಿಪಿಎಸ್‌ಗೆ ತಾನು ಸಹಿ ಮಾಡಿರುವುದಿಲ್ಲವೆಂದು ಹೇಳಿದ್ದಾರೆ. ಈ ಬಗ್ಗೆ ನಿ.ಡಿ–3 ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಈ ದಾಖಲೆಯನ್ನು ಪರಿಶೀಲಿಸಿದಾಗ ಈ

ಆ.ಸ.ನೌ–2 ರವರ ಕರ್ತವ್ಯ ಅವಧಿಯಾದ **ದಿನಾಂಕ 14/07/2014** ರಂದು ಈ ಜಿಪಿಎಸ್ ನ್ನು ತಂತ್ರಾಂಶಕ್ಕೆ ಅಳವಡಿಸಿರುವುದು ಕಂಡುಬರುತ್ತದೆ. ಸಿ.ಇ.ಓ ರವರು ರಚಿಸಿದ ತನಿಖಾ ತಂಡ ಸಲ್ಲಿಸಿದ ನಿ.ಪಿ–5 ವರದಿಯಲ್ಲಿನ ಪುಟಸಂಖ್ಯೆ 4 ರಲ್ಲಿ ಫಲಾನುಭವಿ ಕ್ರಮಸಂಖ್ಯೆ 9 ಶ್ರೀಮತಿ ಸಾವಕ್ಕ ನಾಗಪ್ಪ ದವಲಿ ರವರು ಮನೆ ನಿರ್ಮಿಸದೆ ಇದ್ದಾಗ್ಯೂ ಹಣ ಪಡೆಯುವ ಕಾಲಕ್ಕೆ ಬೇರೆ ಮನೆ ತೋರಿಸಿ ಜಿಪಿಎಸ್ ಮಾಡಿರುತ್ತಾರೆಂದು ಕಾಣಿಸಿರುತ್ತಾರೆ. ಈ ಆ.ಸ.ನೌ ರವರು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಆಕ್ಷೇಪಣೆಯಲ್ಲಿ ಈ ಫಲಾನುಭವಿಗೆ 1ನೇ ಕಂತಿನ ಸಹಾಯಧನದ ಮೊತ್ತ ರೂ. **29,800/–** ಗಳನ್ನು ದಿನಾಂಕ 31/07/2014 ರಲ್ಲಿ ಜಮಾ ಆಗಿದ್ದು, ಈ ಕಂತನ್ನು ತನ್ನ ಕರ್ತವ್ಯ ಅವಧಿಯಲ್ಲಿ ನೀಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆದರೆ, ಕಛೇರಿಯ ಸಿಬ್ಬಂದಿಗಳ ಮೇಲೆ ವಿಶ್ವಾಸವಿಟ್ಟು ಈ ಹಣ ಬಿಡುಗಡೆ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ತಾನು ಜವಬ್ದಾರಿಯುತ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿದ್ದು ವಸತಿ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಅವಶ್ಯಕ ದಾಖಲೆಗಳನ್ನು ಪರಿಶೀಲಿಸಿ ಮತ್ತು ಸ್ಥಳಕ್ಕೆ ಭೇಟಿ ನೀಡಿ ಮನೆ ಕಟ್ಟಡ ಕಾಮಗಾರಿಯನ್ನು ಖುದ್ದು ಪರಿಶೀಲಿಸಿದ ನಂತರವೆ, ಈ 1ನೇ ಕಂತಿನ ಹಣ ಬಿಡುಗಡೆ ಮಾಡಬೇಕಾಗಿದ್ದರೂ ಸಹ, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸದೆ 1ನೇ ಕಂತಿನ ಹಣ ಬಿಡುಗಡೆ ಮಾಡಿ ಕರ್ತವ್ಯಲೋಪವೆಸಗಿರುವುದು ರುಜುವಾತಾಗುತ್ತದೆ. ಕಾರಣ, ರೂ. 29,800/– ಗಳ 1ನೇ ಕಂತಿನ ಹಣಕ್ಕೆ ಈ ಆ.ಸ.ನೌ–2 ರವರೆ ಹೊಣೆಗಾರರೆಂದು ನಿರ್ಣಯಿಸಲಾಗಿದೆ ಮತ್ತು ಸದರಿ ಹಣವನ್ನು ಈ ಆ.ಸ.ನೌ–2 ರವರಿಂದ ವಸೂಲಿ ಮಾಡಲು ನಿರ್ದೇಶಿಸಬಹುದೆಂದು ಅಭಿಪ್ರಾಯಿಸಲಾಗಿದೆ.

24) ಆ.ಸ.ನೌ–5 ಶ್ರೀ ಸಂಗಮೇಶ್ ಸಜ್ಜನ್ ರವರು ಡಿಡಬ್ಲ್ಯೂ–4 ಎಂದು, ಮೌಖಿಕ ಸಾಕ್ಷ್ಯ ನುಡಿದಿದ್ದು, ತಮ್ಮ ಮೌಖಿಕ ಸಾಕ್ಷ್ಯದ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ದಿನಾಂಕ 19/11/2015 ರಿಂದ 31/12/2015 ರವರೆಗೆ ಮಾತ್ರ ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ, ಈ 1 ತಿಂಗಳ 11

ದಿವಸಗಳ ಕರ್ತವ್ಯಾವದಿಯಲ್ಲಿ ಯಾವುದೇ ವಸತಿ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ತಾನು ತಯಾರಿಸಿರುವುದಿಲ್ಲವೆಂದು ಹಾಗೂ ಗ್ರಾಮಸಭೆಯನ್ನು ಸಹ ತಾನು ಕರೆದಿರಲಿಲ್ಲವೆಂದು ನುಡಿದಿರುತ್ತಾರೆ. ಅದೇ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದ್ದ ಕೋಟಾದಡಿ 5 ಜನ ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡಿ ರೂ. 3,72,500/- ಗಳನ್ನು ಬಿಡುಗಡೆ ಮಾಡಿರುವುದಿಲ್ಲವೆಂದು ಏಕೆಂದರೆ, ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡುವ ಅವಧಿಯಲ್ಲಿ ತಾನು ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು ಹಾಗೂ ಮಹಿಳೆಯರು ಮತ್ತು ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದ 15 ಫಲಾನುಭವಿಗಳು ಮನೆ ಕಟ್ಟಿಕೊಂಡಿದ್ದರೂ ಸಹ ಅವರುಗಳ ಹೆಸರುಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡದೆ ಮತ್ತು ಠರಾವು ಹೊರಡಿಸದೆ ನಿಯಮಬಾಹಿರವಾಗಿ ಅವರಿಗೆ ಹಣ ಬಿಡುಗಡೆ ಮಾಡಿರುವುದಾಗಿ ಹೇಳಿರುವ ಅವಧಿಯಲ್ಲಿ ತಾನು ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು ನುಡಿದಿರುತ್ತಾರೆ.

25) ಶಿಸ್ತು ಪ್ರಾಧಿಕಾರವು ನೀಡಿರುವ ಮೌಖಿಕ ಸಾಕ್ಷ್ಯ ಮತ್ತು ನಿ.ಪಿ-5 ಮತ್ತು 6 ವರದಿಗಳನ್ನು ಪರಿಶೀಲಿಸಿದಾಗ, ಈ ಆ.ಸ.ನೌ ರವರುಗಳು ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿರುವುದನ್ನು ರುಜುವಾತುಪಡಿಸಿರುತ್ತಾರೆ. ಆದರೆ, ಈ ಆ.ಸ.ನೌ-3 ರಿಂದ 5 ರವರುಗಳು ಹಣ ದುರುಪಯೋಗಪಡಿಸಿಕೊಂಡಿರುವುದನ್ನು ನಿರ್ದಿಷ್ಟವಾಗಿ ರುಜುವಾತುಪಡಿಸಿರುವುದಿಲ್ಲ. ನಿ.ಪಿ-6 ಲೋಕಾಯುಕ್ತ ಸಂಸ್ಥೆಯ ತನಿಖಾಧಿಕಾರಿ ಸಲ್ಲಿಸಿದ ವರದಿಯಲ್ಲಿ 2010 ರಿಂದ 2015 ನೇ ಸಾಲಿನವರೆಗೆ ವಸತಿ ಯೋಜನೆಗಳಲ್ಲಿ ಅನರ್ಹ ಫಲಾನುಭವಿಗಳಿಗೆ ನಿಯಮ ಬಾಹಿರವಾಗಿ ಹಣ ಮಂಜೂರಾಗಲು ಅನುವು ಮಾಡಿಕೊಟ್ಟು ಕರ್ತವ್ಯವನ್ನು ನಿಷ್ಠೆಯಿಂದ ಮಾಡದೆ ದುರ್ನಡತೆ ತೋರಿಸಿರುತ್ತಾರೆಂಬುದಾಗಿ ಹೇಳಿರುತ್ತಾರೆ.

26) ಪಿ.ಡಬ್ಲ್ಯೂ-2 ತನಿಖಾಧಿಕಾರಿಯು ತಮ್ಮ ಪಾಟೀ ಸವಾಲಿನಲ್ಲಿ ಆ.ಸ.ನೌ-3 ಮತ್ತು 4 ರವರು ನಿರ್ದಿಷ್ಟವಾಗಿ ಎಸಗಿರುವ ದುರ್ನಡತೆಯಾಗಲೀ ಅಥವಾ ಹಣದ ಅವ್ಯವಹಾರವಾಗಲೀ ಹೇಳಿರುವುದಿಲ್ಲ ಎಂಬುದಾಗಿ ಸೂಚಿಸಿದ್ದನ್ನು ನಿಜವೆಂದು ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ಈ ತನಿಖಾಧಿಕಾರಿಯು ಹಾವೇರಿ ಸಿ.ಇ.ಓ ರವರು ಸಲ್ಲಿಸಿದ ನಿ.ಪಿ-5 ವರದಿ ಆಧಾರದ ಮೇಲೆ ನಿ.ಪಿ-6 ವರದಿಯನ್ನು ಸಲ್ಲಿಸಿರುವುದನ್ನು ನಿಜವೆಂದು ಒಪ್ಪಿಕೊಂಡಿರುತ್ತಾರೆ. ತಾನು ಸ್ಥಳಕ್ಕೆ ಖುದ್ದು ಭೇಟಿ ನೀಡಿರುವುದಿಲ್ಲವೆಂಬುದನ್ನು ನಿಜವೆಂದು ಒಪ್ಪಿಕೊಂಡಿರುತ್ತಾರೆ. ಆ.ಸ.ನೌ-2 ಮತ್ತು 5 ರವರ ವಿರುದ್ಧ ಸಹ ನಿ.ಪಿ-6 ರಲ್ಲಿ ಯಾವುದೆ ಆರೋಪ ಮಾಡಿರುವುದಿಲ್ಲವೆಂಬುದನ್ನು ನಿಜವೆಂದು ಒಪ್ಪಿಕೊಂಡಿರುತ್ತಾರೆ. ಲೋಕಾಯುಕ್ತ ತನಿಖಾಧಿಕಾರಿಯು ಈ ರೀತಿ ಸಾಕ್ಷ್ಯ ನುಡಿದಿರುವುದನ್ನು ಪರಿಶೀಲಿಸಿದಾಗ ವಿಚಾರಣೆಯಲ್ಲಿರುವ ಆ.ಸ.ನೌ-3 ರಿಂದ 5 ರವರು ನಿರ್ದಿಷ್ಟವಾಗಿ ಹಣ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಸೂಕ್ತ ಸಾಕ್ಷ್ಯವನ್ನು ನೀಡಿರುವುದಿಲ್ಲ ಎಂಬುದು ಕಂಡುಬರುತ್ತದೆ. ಆದರೆ, ಈ ಆ.ಸ.ನೌ-2 ರಿಂದ 5 ರವರುಗಳು ಅತ್ತಿಗೇರಿ ಗ್ರಾಮಪಂಚಾಯತಿಯಲ್ಲಿ ತಮ್ಮ ತಮ್ಮ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿರುವುದು ನಿರ್ವಿವಾದ.

27) ಮಂಡನಾಧಿಕಾರಿಗಳು ಸಹ ತಮ್ಮ ವಾದದಲ್ಲಿ ಈ ಆ.ಸ.ನೌ-2 ರವರು ಫಲಾನುಭವಿಯಾದ ಶ್ರೀಮತಿ ಸಾವಕ್ಕ ಕೋಂ ನಾಗಪ್ಪ ದವಲಿ ರವರಿಗೆ 1ನೇ ಕಂತಿನ ಹಣ ಬಿಡುಗಡೆಯಾಗಲು ಅನುವು ಮಾಡಿಕೊಟ್ಟಿರುವುದಾಗಿ ವಾದಿಸಿರುತ್ತಾರೆ. ಅಲ್ಲದೆ, ಫಲಾನುಭವಿಯು ಮಂಜೂರಾದ ಸ್ಥಳದಲ್ಲಿ ಮನೆ ಕಟ್ಟದಿದ್ದರೂ ಸಹ ಆ.ಸ.ನೌ-2 ರವರು ಬೇರೆ ಸ್ಥಳದಲ್ಲಿ ನಿರ್ಮಿಸಿದ ಮನೆಯ ಜಿ.ಪಿ.ಎಸ್ ಮತ್ತು ಛಾಯಚಿತ್ರಗಳನ್ನು ದತ್ತಾಂಶದಲ್ಲಿ ಅಳವಡಿಸಿ ಹಣ ಬಿಡುಗಡೆಯಾಗಲು ಅನುವು ಮಾಡಿಕೊಟ್ಟಿರುತ್ತಾರೆಂಬುದು ನಿ.ಪಿ-5 ತನಿಖಾ ವರದಿಯಿಂದ ರುಜುವಾತಾಗುತ್ತದೆಂದು ಮಂಡನಾಧಿಕಾರಿಗಳು ವಾದಿಸಿರುತ್ತಾರೆ.

28) ಈ ಎಲ್ಲಾ ಕಾರಣಗಳಿಂದ ಶಿಸ್ತು ಪ್ರಾಧಿಕಾರದವರು **ಆ.ಸ.ನೌ–2 ಶ್ರೀ ಬಸವಂತಪ್ಪ ಎಸ್ ಅಮಾತ್ಯಣ್ಣನವರ,** ನಿವೃತ್ತ ಪಂಚಾಯತಿ ಅಭಿವೃದ್ದಿ ಅಧಿಕಾರಿ ರವರ ವಿರುದ್ಧ ರಚಿಸಲಾದ ಆರೋಪವನ್ನು ಭಾಗಶ: ರುಜುವಾತುಪಡಿಸಿರುತ್ತಾರೆಂದು ನಿರ್ಣಯಿಸಲಾಗಿದೆ. **ಆ.ಸ.ನೌ–3 ಶ್ರೀ. ಮಲ್ಲಪ್ಪ ದೇವಪ್ಪ ವಿಜಾಪುರ,** ಗ್ರಾಮ ಪಂಚಾಯತಿ ಕಾರ್ಯದರ್ಶಿ, **ಆ.ಸ.ನೌ–4 ಶ್ರೀ. ಶೇಖರಪ್ಪ ಶಿವಪ್ಪ ಪಾವಿನ್,** ಪಂಚಾಯತಿ ಅಭಿವೃದ್ದಿ ಅಧಿಕಾರಿ ಮತ್ತು **ಆ.ಸ.ನೌ–5 ಶ್ರೀ. ಸಂಗಮೇಶ ಸಜ್ಜನ್,** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅತ್ತಿಗೆರೆ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ, ರವರುಗಳ ವಿರುದ್ಧ ಹೊರಿಸಲಾದ ಆಪಾದನೆಯಾದ **ದುರ್ನಡತೆ ಮತ್ತು ಕರ್ತವ್ಯಲೋಪಗಳನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆಂದು** ನಿರ್ಣಯಿಸಲಾಗಿದೆ. ಅಲ್ಲದೇ, ಶಿಸ್ತು ಪ್ರಾಧಿಕಾರದವರು ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳು ಆ.ಸ.ನೌ–2 ರವರು ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ (probabilities) ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ ಅಂಶ 1 ಕ್ಕೆ ಭಾಗಶ: ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

29) ಆಪಾದಿತ ಸರ್ಕಾರಿ ನೌಕರ–1 ಶ್ರೀ **ರಾಜೇಂದ್ರಕುಮಾರ್ ಕಡೇಮನಿ, ಹಿಂದಿನ** ಪಂಚಾಯತಿ ಅಭಿವೃದ್ದಿ ಅಧಿಕಾರಿ, ಅತ್ತಿಗೇರಿ ಗ್ರಾಮ ಪಂಚಾಯತಿ ಶಿಗ್ಗಾಂವ್ ತಾಲ್ಲೂಕು ರವರು ದಿನಾಂಕ **02.02.2020** ರಂದು ನಿಧನ **ಹೊಂದಿರುವುದಾಗಿ ಪೊಲೀಸ್** ನಿರೀಕ್ಷಕರು, **ಕರ್ನಾಟಕ ಲೋಕಾಯುಕ್ತ, ಹಾವೇರಿ ರವರು ವರದಿ** ನೀಡಿದ್ದು, ಆದ್ದರಿಂದ ಆಪಾದಿತ ಸರ್ಕಾರಿ ನೌಕರ–1 ರವರ ವಿರುದ್ಧ ಸರ್ಕಾರಕ್ಕೆ ಅಬೆಟೆಡ್ ವರದಿಯನ್ನು ಶಿಫಾರಸ್ಸು ಮಾಡಬೇಕಾಗಿ ಕೋರುತ್ತೇನೆ.

ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

No. UPLOK-1/DE/1018/2017/ARE-16

**ಆದೇಶ**

ಶಿಸ್ತು ಪ್ರಾಧಿಕಾರದವರು **ಆ.ಸ.ನೌ–2 ಶ್ರೀ ಬಸವಂತಪ್ಪ ಎಸ್ ಅಮಾತ್ಯಣ್ಣನವರ,** ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರವರ ವಿರುದ್ಧದ ಆಪಾದನೆಯನ್ನು ಭಾಗಶ: ರುಜುವಾತುಪಡಿಸಲಾಗಿದೆ ಹಾಗೂ ಸದರಿಯವರಿಂದ ರೂ. **29,800/–** ರೂಪಾಯಿಗಳನ್ನು ವಸೂಲು ಮಾಡಲು ನಿರ್ದೇಶಿಸಬಹುದಾಗಿರುತ್ತದೆ.

**ಆ.ಸ.ನೌ–3 ಶ್ರೀ. ಮಲ್ಲಪ್ಪ ದೇವಪ್ಪ ವಿಜಾಪುರ,** ಗ್ರಾಮ ಪಂಚಾಯತಿ ಕಾರ್ಯದರ್ಶಿ, **ಆ.ಸ.ನೌ–4 ಶ್ರೀ. ಶೇಖರಪ್ಪ ಶಿವಪ್ಪ ಪಾವಿನ್,** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು **ಆ.ಸ.ನೌ–5 ಶ್ರೀ. ಸಂಗಮೇಶ ಸಜ್ಜನ್,** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅತ್ತಿಗೆರೆ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ, ರವರುಗಳ ವಿರದ್ಧದ ಆಪಾದನೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **ವಿಫಲವಾಗಿದೆ** ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

(ಸೆಲ್ವಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/1018/2017/ARE-16

Multi Storied Building,
Dr. B.R. Ambedkar Veedhi,
Bengaluru-560 001
Date: **25/03/2021**

**RECOMMENDATION**

Sub:- Departmental inquiry against;

1) Sri Rajendrakumar Y Kademani, Panchayath Development Officer, Attigeri Grama Panchayath, Shiggaon Taluk, Haveri District;
2) Sri Basavanthappa S Amatennavar, Retired Panchayath Development Officer, Attigeri Grama Panchayath, Shiggaon Taluk, Haveri District;
3) Sri Mallappa Devappa Vijapur, Panchayath Secretary, Attigeri Grama Panchayath, Shiggaon Taluk, Haveri District;
4) Sri Shekharappa Shivappa Pavin, the then Panchayath Development Officer, Attigeri Grama Panchayath, Shiggaon Taluk, Haveri District; and
5) Sri Sangamesha I Sajjan, the then Panchayath Development Officer, Attigeri Grama Panchayath, Shiggaon Taluk, Haveri District. – Reg.

Ref:- 1) Govt. Order No. ಗ್ರಾಅಪ 635 ಗ್ರಾಪಂಕಾ 2017, Bengaluru dated 9/8/2017.

2) Nomination order No.UPLOK-1/DE/1018/2017, Bengaluru dated 21/9/2017 of Upalokayukta-1, State of Karnataka, Bengaluru

3) Inquiry Report dated 17/3/2021of Additional Registrar of Enquiries-16, Karnataka Lokayukta, Bengaluru

----

The Government by its order dated 9/8/2017 initiated the disciplinary proceedings against;

1) Sri Rajendrakumar Y Kademani, Panchayath Development Officer, Attigeri Grama Panchayath, Shiggaon Taluk, Haveri District;

2) Sri Basavanthappa S Amatennavar, Retired Panchayath Development Officer, Attigeri Grama Panchayath, Shiggaon Taluk, Haveri District;

3) Sri Mallappa Devappa Vijapur, Panchayath Secretary, Attigeri Grama Panchayath, Shiggaon Taluk, Haveri District;

4) Sri Shekharappa Shivappa Pavin, the then Panchayath Development Officer, Attigeri Grama Panchayath, Shiggaon Taluk, Haveri District; and

5) Sri Sangamesha I Sajjan, the then Panchayath Development Officer, Attigeri Grama Panchayath, Shiggaon Taluk, Haveri District.

(hereinafter referred to as Delinquent Government Officials 1 to 5, for short as DGO-1, DGO-2, DGO-3, DGO-4 and DGO-5 respectively) and entrusted the Departmental Inquiry to this Institution.

2. This Institution by Nomination Order No.UPLOK-1/DE/1018/2017, Bengaluru dated 21/9/2017 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs 1 to 5 for the alleged charge of misconduct, said to have been committed by them. Subsequently, by Order No. UPLOK-1&2/DE/Transfers/2019, dated 7/2/2019, the Additional Registrar of Enquiries-16, Karnataka Lokayukta, Bengaluru was re-nominated as inquiry officer to conduct departmental inquiry against DGOs 1 to 5.

3. The DGO-1 Sri Rajendrakumar Y Kademani, Panchayath Development Officer; DGO-2 Sri Basavanthappa S Amatennavar, Retired Panchayath Development Officer; DGO-3 Sri Mallappa Devappa Vijapur, Panchayath Secretary; DGO-4 Sri Shekharappa Shivappa Pavin, the then Panchayath Development Officer; and DGO-5 Sri Sangamesha I Sajjan, the then Panchayath

Development Officer – All of Attigeri Grama Panchayath, Shiggaon Taluk, Haveri District were tried for the following charges.

"ಮೊದಲನೆಯದಾಗಿ:- ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ರಾಜೇಂದ್ರ ಕುಮಾರ್ ಕಡೇಮನಿ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ, ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಬಸವಂತಪ್ಪ ಎಸ್. ಅಮಾತ್ಯಣ್ಣನವರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿಅಧಿಕಾರಿಯಾಗಿ, ಮೂರನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ, ನಾಲ್ಕನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಶೇಖರಪ್ಪ ಶಿವಪ್ಪ ಪಾವಿನ್ ಆದ ನೀವು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು ಐದನೆಯ ಆಪಾದಿತ ಸರ್ಕಾರಿ ನೌಕರರಾದ ಸಂಗಮೇಶ ಸಜ್ಜನ್ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸಂಬಂಧಪಟ್ಟಂತೆ 2010 ರಿಂದ 2015 ನೇಯ ಸಾಲಿನವರೆಗಿನ ಇಂದಿರಾ ಆವಾಸ್, ಬಸವ ವಸತಿ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಆಯ್ಕೆಯಾಗಿದ್ದ 42 ಫಲಾನುಭವಿಗಳ ಪೈಕಿ 13 ಫಲಾನುಭವಿಗಳು ಮನೆಗಳನ್ನು ನಿರ್ಮಿಸದೆ ಬೇರೆ ಮನೆಗಳ ಜಿ.ಪಿ.ಎಸ್. ಮತ್ತು ಛಾಯಚಿತ್ರಗಳನ್ನು ದತ್ತಾಂಶದಲ್ಲಿ ಅಳವಡಿಸಿ ರೂ. 6,26,300/- ಗಳನ್ನು ಬಿಡುಗಡೆ ಮಾಡಲು ನೀವುಗಳು ಎಂದರೆ 1 ರಿಂದ 5 ನೆಯ ಆಪಾದಿತ ಸರ್ಕಾರಿ ನೌಕರರುಗಳು ಅನುವು ಮಾಡಿಕೊಟ್ಟು ಆ ಮೂಲಕ ನೀವುಗಳು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

ಎರಡನೆಯದಾಗಿ:- ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ **ರಾಜೇಂದ್ರ ಕುಮಾರ್ ಕಡೇಮನಿ** ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು,

ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ, ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಬಸವಂತಪ್ಪ ಎಸ್. ಅಮಾತ್ಯಣ್ಣನವರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ, ಮೂರನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ, ನಾಲ್ಕನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಶೇಖರಪ್ಪ ಶಿವಪ್ಪ ಪಾವಿನ್ ಆದ ನೀವು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು ಐದನೆಯ ಆಪಾದಿತ ಸರ್ಕಾರಿ ನೌಕರರಾದ ಸಂಗಮೇಶ ಸಜ್ಜನ್ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸಂಬಂಧಪಟ್ಟಂತೆ 2010 ರಿಂದ 2015 ನೇಯ ಸಾಲಿನವರೆಗಿನ ಇಂದಿರಾ ಆವಾಸ್, ಬಸವ ವಸತಿ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದ್ದ ಕೋಟಾದಡಿಯಲ್ಲಿ 5 ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡಿ ಆ ಸಂಬಂಧ ರೂ. 3,72,500/- ಗಳನ್ನು ಬಿಡುಗಡೆ ಮಾಡಲು ನೀವು ಎಂದರೆ ಆಪಾದಿತ ಸರ್ಕಾರಿ ನೌಕರರಾದ 1 ರಿಮದ 5 ರವರು ಅನುವು ಮಾಡಿಕೊಟ್ಟು ಆ ಮೂಲಕ ನೀವುಗಳು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

ಮೂರನೆಯದಾಗಿ:- ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ **ರಾಜೇಂದ್ರ ಕುಮಾರ್ ಕ**ಡೇಮನಿ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ, ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಬಸವಂತಪ್ಪ ಎಸ್. ಅಮಾತ್ಯಣ್ಣನವರ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿಅಧಿಕಾರಿಯಾಗಿ, ಮೂರನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ

ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ, ನಾಲ್ಕನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಶೇಖರಪ್ಪ ಶಿವಪ್ಪ ಪಾವಿನ್ ಆದ ನೀವು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು ಐದನೆಯ ಆಪಾದಿತ ಸರ್ಕಾರಿ ನೌಕರರಾದ ಸಂಗಮೇಶ ಸಜ್ಜನ್ ಆದ ನೀವು, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸಂಬಂಧಪಟ್ಟಂತೆ 2010 ರಿಂದ 2015 ನೇಯ ಸಾಲಿನವರೆಗಿನ ಇಂದಿರಾ ಆವಾಸ್, ಬಸವ ವಸತಿ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಮಹಿಳೆಯರು ಹಾಗೂ ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದ 15 ಫಲಾನುಭವಿಗಳು ಮನೆ ಕಟ್ಟಿಕೊಂಡಿದ್ದರೂ ಸಹ ಅವರುಗಳ ಹೆಸರುಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡದೆ ಆ ಸಂಬಂಧ ಠರಾವು ಹೊರಡಿಸದೆ ಫಲಾನುಭವಿಗಳನ್ನಾಗಿ ನಿಯಮಬಾಹಿರವಾಗಿ ಸೇರಿಸಿ ಆ ಸಂಬಂಧ ರೂ. 10,93,000/- ಗಳನ್ನು ಬಿಡುಗಡೆ ಮಾಡಲು ನೀವು ಎಂದರೆ ಆಪಾದಿತ ಸರ್ಕಾರಿ ನೌಕರರಾದ 1 ರಿಂದ 5 ರವರುಗಳು ಅನುವು ಮಾಡಿಕೊಟ್ಟು ಆ ಮೂಲಕ ನೀವು ಎಂದರೆ ಆಪಾದಿತ ಸರ್ಕಾರಿ ನೌಕರರಾದ 1 ರಿಂದ 5 ರವರು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ."

4. During the pendency of the above inquiry, the DGO-1 has died on 2/2/2020. Therefore, the Inquiry officer has recorded the abatement of disciplinary proceedings against DGO-1 Sri Rajendrakumar Y. Kademani, the then Panchayath Development Officer, Attigeri Grama Panchayath, Shiggaon Taluk, Haveri District.

5. The Inquiry Officer (Additional Registrar of Enquiries-16) on proper appreciation of oral and documentary evidence has held that the Disciplinary Authority has partly proved the charges

leveled against DGO-2 Sri Basavanthappa S. Amatennavar, retired Panchayath Development Officer, Attigeri Grama Panchayath, Shiggaon Taluk, Haveri District. Further, the Inquiry officer has held that the Disciplinary Authority has failed to prove the charges leveled against DGO-3 Sri Mallappa Devappa Vijapur, Panchayath Secretary; DGO-4 Sri Shekharappa Shivappa Pavin, the then Panchayath Development Officer; and DGO-5 Sri Sangamesha I Sajjan, the then Panchayath Development Officer – All of Attigeri Grama Panchayath, Shiggaon Taluk, Haveri District.

6. The Inquiry officer has held that DGO-2 has released the 1st installment of a sum of Rs.29,800/- to the beneficiary Smt. Savakka Nagappa Davali (beneficiary Code No.167418), though she has not constructed a house and the GPS of some other house has been uploaded to the software to enable her to get benefit under housing scheme and therefore he is responsible for release of a sum of Rs.29,800/-.

7. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

8. As per the First Oral Statement submitted by DGO-2 Sri Basavanthappa Amatennavar, he has retired from service on 30/9/2014.

9. It is hereby recommended to the Government for recording the abatement of disciplinary proceedings against DGO-1 Sri

Rajendrakumar Y. Kademani, the then Panchayath Development Officer, Attigeri Grama Panchayath, Shiggaon Taluk, Haveri District.

10. It is hereby recommended to the Government for exonerating the DGO-3 Sri Mallappa Devappa Vijapur, Panchayath Secretary; DGO-4 Sri Shekharappa Shivappa Pavin, the then Panchayath Development Officer; and DGO-5 Sri Sangamesha I Sajjan, the then Panchayath Development Officer – All of Attigeri Grama Panchayath, Shiggaon Taluk, Haveri District from the charges leveled against them.

11. Having regard to the nature of charge proved against DGO-2 Sri Basavanthappa S. Amatennavar, the then Panchayath Development Officer, Attigeri Grama Panchayath, Shiggaon Taluk, Haveri District it is hereby recommended to the Government for imposing penalty of withholding 5% of pension payable to DGO-2 for a period of 5 years, apart from recovering a sum of Rs.29,800/- from the pension payable to DGO-2 Sri Basavanthappa S. Amatennavar.

12. Action taken in the matter shall be intimated to this Authority.

Connected records are enclosed herewith.

25/3

**(JUSTICE B.S.PATIL)**
Upalokayukta-1,
State of Karnataka,
Bengaluru